# ಸತ್ಯವೇದವು ಹೇಗೆ ಬಂದಿತು

## ಪರಿಚಯ

# ಇಗೋ ಸತ್ಯವೇದ !

ಕಳೆದ ಎರಡು ಶತಮಾನಗಳಿಂದ ವೇದವಾಕ್ಯದ ವಿರುದ್ಧ ಅನೇಕ ಅಕ್ರಮಣಗಳು ನಡೆದಿವೆ. ಪಂಡಿತರು ಮತ್ತು ಅಧ್ಯಾಪಕರು ಈ ಹಸ್ತ ಪ್ರತಿಗಳನ್ನು ನಂಬಲು ಅಸಾಧ್ಯವೆಂದೂ, ಅದರ ಬರಹಗಾರರು ತಪ್ಪಿಲ್ಲದೇ ಇಲ್ಲವೆಂದೂ, ವೇದವಾಕ್ಯದ ಕಥಾಪಾತ್ರಗಳು ಕಾಲ್ಪನಿಕವೆಂದೂ ದೂಷಿಸಿದ್ದಾರೆ. ದಾವಿದ ರಾಜ ಒಬ್ಬ ಪುರಾಣ ಕಥೆಯ ಪಾತ್ರದಾರ ಮಾತ್ರ, ಮೋಶೆಯ ಅಲೆದಾಡುವ ಒಬ್ಬ ನಿರಕ್ಷರಸ್ಥ ಯೇಸು ಜೀವಿಸಲೆ ಇಲ್ಲವೆಂದು ಕೆಲವರು ಹೇಳುತ್ತಾರೆ. ಘಟನೆಗಳು ನಡೆದು ನೂರಾರು ವರ್ಷಗಳ ನಂತರವೇ ಯೇಸುವಿನ ಕಥೆ ಬರೆದದ್ದು ಎಂದು ಇನ್ನು ಕೆಲವರು ಹೇಳುತ್ತಾರೆ. ಈ ದಿನ ಕೂಡ ಕೆಲವರು ಸತ್ಯವೇದವನ್ನು ಶತಮಾನಗಳಿಂದ ನಮ್ಮ ಕೈಗೆ ಬಂದಿರುವ ಪ್ರಯೋಜನವಿಲ್ಲದ ಸಂಪ್ರದಾಯವೆಂದೂ, ಎಸೊಫಸ್ ಕಲ್ಪನಾ ಕಥೆಗಳ ಮತ್ತು ಗ್ರೀಕ್ ಪುರಾಣ ಕಥೆಗಳ ಹಾಗೆ ಇರುವ ಒಂದು ಬಲಹೀನ ಐತಿಹಾಸಿಕ ದಾಖಲೆಗಳೆಂದೂ ಬೋಧಿಸುತ್ತಾರೆ. 1700 ಮತ್ತು 1800 ರ ಮಹೋಪಾಧ್ಯಯರು ಸತ್ಯವೇದದ ಸಾಧಾರಣದ ತೊಂದರೆಗಳನ್ನು ಐತಿಹಾಸಿಕ ದಾಖಲೆಗಳು ಮಾತ್ರವೇ ಎಂದು ಪ್ರಾಚಾರಿಸಿದ್ದಾರೆ. ನಡೆದ ಸಮಯಕ್ಕಿಂತ ಬಹಳ ವರ್ಷಗಳ ನಂತರ ಬರೆದಿರುವ ಕಾರಣ ಅದು ಖಚಿತವಾಗಿರುವುದಕ್ಕೆ ಅಸಾಧ್ಯವೆಂದಿದ್ದಾರೆ. ಸತ್ಯವೇದದ ಶವಪೆಟ್ಟಿಗೆಯ ಕೊನೆಯ ಕೆಲವು ಆಣಿಗಳನ್ನೊಡೆಯಲು ಕಲಾವಿಮರ್ಶಕರು ಸುತ್ತಿಯನ್ನು ಎತ್ತಿದ್ದಾರೆ.

ವಿಮರ್ಶಕರಲ್ಲಿ ಮುಖ್ಯರಾದ ಜರ್ಮನಿನ ಎಫ್.ಸಿ. ಬೌರ್, ಇನ್ನು ಅನೇಕ ವೇಧಾಂತಿಯರ ಜೊತೆಯಲ್ಲಿ , ಸತ್ಯವೇದ ವಚನಗಳು ಭರವಸೆ ಮೂಡಿಸಲು ಅಸಾಧ್ಯವಾದುದೆಂದು ಕೊರೆಯುಳ್ಳ ಬಣ್ಣ ಹಚ್ಚಿದ್ದಾರೆ. ಹೊಸ ಒಡಂಬಡಿಕೆ ಸುಮಾರೂ 200 ವರ್ಷದಲ್ಲಿ ಬರೆದದ್ದೆಂದು ನಂಬಿ, ಈ ವೇದಾಂತಿಯರು ಹೊಸ ಒಡಂಬಡಿಕೆಯು ಬರೀ ಪುರಾಣಕಥೆ ಮಾತ್ರ ಬೇರೇನಲ್ಲವೆಂದು ಕಲಿಸುತ್ತಿದ್ದರು.

ಈ ವೇದಾಂತಗಳು ಇಂದಿಗೂ ಸುತ್ತವರಿಯುತ್ತಿಲಿದ್ದರು, ಇದೆಲ್ಲ ತಪ್ಪೆಂದು ರುಜುವಾತ್ತಾಗಿದೆ. ಖಚಿತವಾಗಿ ತಪ್ಪೆಂದು ಇತಿಹಾಸ, ವಸ್ತುಶಾಸ್ತ್ರ ಮತ್ತು ಹಸ್ತ ಪ್ರತಿಗಳಲ್ಲಿನ ಶೋಧನೆಗಳು, ಇವೆಲ್ಲ ವೇದಾಂತಗಳನ್ನು ತಪ್ಪೆಂದು ಸ್ಪಷ್ಟವಾಗಿ ಸೂಚಿಸಿವೆ. ಸತ್ಯವೇಧ ಖಚಿತವಾದುದ್ದೇ, ಮೂಲ ಲೇಖಕರ ಅದೇ ಪದಗಳು ನಮಗೆ ಹಸ್ತಪ್ರತಿಗಳಲ್ಲಿ ದೊರೆಯುತ್ತದೆ. ಮೂಲ ಗ್ರಂಥದಲ್ಲಿ ಯಾವುದೆ ಭ್ರಷ್ಟಾಚಾರವಿಲ್ಲ, ಸತ್ಯವೇದಕ್ಕಂಟಿದ್ದ ದೂಮ ತೊಲಗಿಸಲ್ಪಟ್ಟು ಎತ್ತರವಾಗಿಯೇ ನಿಂತಿದೆ. ಈ ಪುಸ್ತಕವನ್ನು ನಂಬುವುದೊ ಬಿಡುವುದೋ ಈಗ ನಿಮ್ಮ ನಿರ್ಧಾರ. ಸತ್ಯವೇದವು ಅಪೋಸ್ತಲರ ಸಾಕ್ಷ್ಯಕ್ಕೆ ಸರಿಯಾಗಿಯೆ ಬರೆದಿದೆ. ಇದನ್ನು ಈ ದಿನ ಕೆಲವರು ಮಾತ್ರ ಇಲ್ಲವೆನ್ನುತ್ತಾರೆ.

ಬಹಳ ಸಾರಿ ನಾನು ಅಂತಹ ಶಿಷ್ಯರೊಂದಿಗೆ ಮಾತಾಡುತ್ತೇನೆ, ಯಾರಿಗೆ ವಚನಗಳನ್ನು ಖಚಿತಪಡಿಸುವ ಸಾಕ್ಷ್ಯಗಳ ಮಹತ್ವವನ್ನು ಅರಿವಿಲ್ಲದವರು. ವಿದ್ಯಾರ್ಥಿಯರು, ತಂದೆ ತಾಯಿಯಂದಿರು ಮತ್ತು ಸತ್ಯವೇದ ಓದುಗರು ಸತ್ಯವೇದದ ಸಾಕ್ಷ್ಯಗಳು ನಿರ್ದಿಷ್ಟತೆಯನ್ನು ಅರ್ಥಮಾಡಿಕೊಂಡಿಲ್ಲ, ಇನ್ನು ಮುಂಬರುವ ಕೆಲವು ಅಧ್ಯಾಯಗಳಲ್ಲಿ ನಾವು ನಮಗೆ ಸತ್ಯವೇದ ಹೇಗೆ ಸಿಕ್ಕಿತು ಅನ್ನೊದರ ಬಗ್ಗೆ ಮಾತ್ರವಲ್ಲದೆ ಎಷ್ಟು ನಂಬುವಂತದ್ದು ಎಂಬ ವಿಷಯವನ್ನು ಕಾಣಲಿದ್ದೇವೆ. ವಚನಗಳನ್ನು ಖಚಿತ ಪಡಿಸುವುದಕ್ಕಾಗಿರುವ ಬೆಟ್ಟದಷ್ಟು ಸಾಕ್ಷ್ಯಗಳನ್ನು ಮತ್ತು ಅದಕ್ಕೋಸ್ಕರ ಮಾಡಿರುವಂತೆ ಶೋಧನೆಯನ್ನು ನೋಡಿ ನೀವು ಆಶ್ಚರ್ಯಚಕಿತರಾಗುವಿರೆಂದು ನಾನು ನಂಬುತ್ತೇನೆ. ನಿಮ್ಮ ನಂಬಿಕೆ ದೃಢವಾಗುತ್ತದೆಂದು ನನಗೆ ಗೊತ್ತಿದೆ. ನಿಶಬ್ದವಾಗಿಯೆ, ಬಹಳ ಆರ್ಭಟವಿಲ್ಲದೆಯೆ ಸತ್ಯವೇದ ಎಲ್ಲಾ ವಿಮರ್ಶಕರಿಗಿಂತ ಬಲವಾದದ್ದೆಂದು ದೃಢಪಡಿಸಿದೆ.

ಸತ್ಯವೇದ ಬೇರಾವ ಪುಸ್ತಕಗಳಿಗಿಂತಲು ಪ್ರಸಿದ್ಧವಾದದೆಂದು ನಾವು ಯಾವ ಸಂಶಯವಿಲದೆ ಹೇಳಬಹುದು. ಈ ಕೆಳಗಿನ ಸತ್ಯಾಂಶಗಳನ್ನು ನೋಡಿ :-

* ಸತ್ಯವೇದವನ್ನು 1500 ವರ್ಷಗಳ ಮತ್ತು 40 ಸಂತತಿಗಳ ಅಂತರದಲ್ಲಿ ಬರೆದಿದೆ (1400 ಕ್ರಿಸ್ತ ಪೂರ್ವದಿಂದ 80 ಕ್ರಿಸ್ತ ಶಕ)

* ಇದನ್ನು 3 ಭೂಖಂಡದಲ್ಲಿ, 3 ಭಾಷೆಗಳಲ್ಲಿ (ಇಬ್ರಿಯ, ಅರಾಮಿಕ್ ಮತ್ತು ಗ್ರೀಕ್) ಬರೆದಿದೆ.

* ಎಲ್ಲಾ ತರಹದ ಜೀವನ ಶೈಲಿಯಿಂದ ಬಂದ 50 ಲೇಖಕರು ಬರೆದದ್ದು (ರಾಜರು, ರೈತರು, ತತ್ವಜ್ಞಾನಿಗಳು, ಮಿನುಗಾರರು, ರಾಜನೀತಿ ನಿಪುಣರು, ವಿದ್ವಾಂಸರು ಸೇರಿ)

* ಹಲವಾರು ಶತಮಾನಗಳಲ್ಲಿ ನಿಜವಾದ ನೂರಾರು ಪ್ರವಾದನೆಗಳು ಅದರಲ್ಲಿವೆ

* ಇದು ಐತಿಹಾಸಿಕವಾಗಿಯು ಮತ್ತು ಸಾಂಸ್ಕೃತಿಕವಾಗಿಯು ಸಂಪೂರ್ಣವಾಗಿ ಖಚಿತವಾದದ್ದೆ.

* ಈ ಎಲ್ಲಾ ಲೇಖಕರು, ಈ ಎಲ್ಲಾ ಶತಮಾನಗಳಿಂದಲೂ, ಒಂದೆ ಸಂದೇಶವನ್ನು ಸಮಾನವಾಗಿ ಸಾರಿದ್ದಾರೆ. ಸತ್ಯ, ಉದ್ದೇಶ, ಧ್ಯೇಯ, ದೇವರು, ಮನುಷ್ಯ, ನಿಜಾಯಿತಿ, ಪಾಪ, ನೀತಿವಂತಿಕೆ, ಮೂಲ ಮತ್ತು ಗುರಿ ಈ ಎಲ್ಲಾ ವಿಷಯಗಳಲ್ಲಿ ಇಡೀ ಸತ್ಯವೇದದಲ್ಲಿ ಒಂದೇ ಸಂದೇಶ ಹೊಂದಿದೆ. 50 ಜನ ಧಾರ್ಮಿಕಗ ನಾಯಕರು, ಮೇಲಿರುವ ಯಾವುದಾದರು ಒಂದು ವಿಷಯದ ಬಗ್ಗೆ ಒಂದೆ ನಂಬಿಕೆ ಹೊಂದುವುದಕ್ಕೆ ನಿಮ್ಮ ಪಟ್ಟಣದಲ್ಲಿ ಪ್ರಯತ್ನಿಸಿ ನೋಡಿ.

* ವಿಜ್ಞಾನದ ಬಗ್ಗೆ ಸರಳವಾಗಿ ಮತ್ತು ಸರಿಯಾಗಿ ಯಾವುದೆ ಅಸಂಬದ್ದವಿಲ್ಲದೆ ಸತ್ಯವೇದದಲ್ಲಿ ವಿಶ್ಲೇಶಿಸಿದೆ. (ಪರಲೋಕದಲ್ಲಿ ಹೋರಾಟ ನಡೆದಾಗ ಅಲ್ಲಿನ ಒಂದು ದೇವರ ದೇಹದ ತುಂಡುಗಳಿಂದ ಭೂಮಿ ಸೃಷ್ಟಿಯಾಯಿತು ಎಂಬ ಬಾಬಿಲೋನನ ಕಥೆಗೆ ಹೋಲಿಸಿ ನೋಡಿ)

* ಒಂದು ಸಮಯದಲ್ಲಿ ಪ್ರಾಚೀನ ಜನರು ಆಕಾಶದಲ್ಲಿ 1100 ನಕ್ಷತ್ರಗಳಿದ್ದವೆಂದು ನಂಬಿದ್ದರು. ಯೆರೆಮಿಯ 33:22 ರಲ್ಲಿ ನಕ್ಷತ್ರಗಳು ಎಣಿಸಲಾಗದಷ್ಟಿವೆಯೆಂದು ಕ್ರಿಸ್ತಪೂರ್ವ 600ರಲ್ಲಿಯೇ ಬರೆದಿದ್ದರು.

ಯೇಸು ನಿಜವಾಗಿಯೆ ಜೀವಿಸಿದ್ದಾನೆ ಎಂದು ನಂಬಿಕೆ ಮೂಡಿಸುವುದಕ್ಕೆ ಇಂತಹ ಅನೇಕ ಸಾಕ್ಷ್ಯಗಳಿವೆ. ಅಂತಹ ಸಾಕ್ಷ್ಯಗಳು ಯಾವುವು? ಇವೆಲ್ಲ ಕ್ರೈಸ್ತ ಧರ್ಮಕ್ಕೆ ಸೇರಿಲ್ಲದ ಆ ಶತಮಾನದ ಬರಹಗಳಲ್ಲಿಂದ ಬರುತ್ತದೆ.

ತಾಲ್ಲಸ್ ಒಬ್ಬ ಸಮರಿಯಾದ ಇತಿಹಾಸಗಾರ, 52 ಕ್ರಿಸ್ತ ಪೂರ್ವದಲ್ಲಿಯೇ ಯೇಸುವಿನ ಬಗ್ಗೆ ಬರೆದಿದ್ದಾರೆ. ಯೇಸುವನ್ನು ಶಿಲುಬೆಗೆ ಹಾಕಿದ ದಿನ ಕತ್ತಲಾದ ಕಾರಣವನ್ನು ಪ್ರಕೃತಿಕವಾಗಿ ವಿಸ್ತರಿಸಲು ತಾಲ್ಲಸಾ ಯೇಸು ಮತ್ತು ಆತನ ಮರಣವನ್ನು ವಿವರಿಸುತ್ತಾರೆ. ಯೇಸುವಿನ ಬಗ್ಗೆ ವಿವರ ಹೊಂದಿದ ತಾಲ್ಲಸ್ ಕೃತಿಯು 52 ಕ್ರಿಸ್ತ ಸಕದಲ್ಲಿ ಟ್ರೊಜನ್ ಯುದ್ಧ ನಡೆದ ಪೂರ್ವ ಭೂಖಂಡದಲ್ಲಿ ಸಿಕ್ಕಿತು. ಆ ದಿನ ಕತ್ತಲಾದ ಕಾರಣ ಗ್ರಹಣವೆಂದು ವಿವರಿಸಿದ್ದಾರೆ. ಆದರೆ ಗಮನಿಸಬೇಕಾದ ವಿಷಯವೆಂದರೆ ಆ ದಿನ ಇಡೀ ವಿಶ್ವದಲ್ಲಿ ಕತ್ತಲೆ ಮೂಡಿತ್ತ ಎನ್ನು ಬಗ್ಗೆ ತಾಲ್ಲಸ್ ವಾದ ಮಾಡಿಲ್ಲ. ಆ ಅಂಶ ಅವರು ಒಪ್ಪಿಕೊಂಡರು. ಅವರು ಬರೀ ಕತ್ತಲಿನ ಕಾರಣ ಮಾತ್ರ ವಿವರಿಸಿದರು. ಆದರೆ ಅವರು ಯೇಸು ಇತಿಹಾಸದಲ್ಲಿ ಜೀವಂತವಾಗಿದ್ದ ವ್ಯಕ್ತಿಯೆಂದು ದೃಢಪಡಿಸುತ್ತಾರೆ.

ಕೊರ್ನಿಲಿಯಸ್ ಟೆಕಿಟಸ್ ಒಬ್ಬ ರೊಮಾಪುರದ ಇತಿಹಾಸಗಾರ ಕ್ರಿಸ್ತಪೂರ್ವ 112ರಲ್ಲಿ ಬರೆಯುತ್ತಿದ್ದರು. ಅವರು ಬರೆದ ಪುಸ್ತಕ 'ಅನ್ನಲ್ಸ್' ನಲ್ಲಿ ಯೇಸುವಿನ ಬಗ್ಗೆ ಬರೆದಿದ್ದಾರೆ. ನೆರೊ ಮತ್ತು ವಿಶ್ವಾಸಿಗಳಿಗೆ ಆತನು ಕೊಟ್ಟ ಹಿಂಸೆಯ ಬಗ್ಗೆ ಬರೆದಿದ್ದಾರೆ. ನೆರೊ ಮತ್ತು ವಿಸ್ವಾಸಗಳಿಗೆ ಆತನು ಕೊಟ್ಟ ಹಿಂಸೆಯ ಬಗ್ಗೆ ಬರೆಯಬೇಕಾದಾಗ, ಕ್ರೈಸ್ತರಿಗೆ ಜೀವಂತವಾಗಿ ಸುಟ್ಟ ವಿಷಯ ಮತ್ತು ಯೇಸು ಕ್ರೈಸ್ತನ ಬಗ್ಗೆ ಕೂಡ ವಿವರಿಸಿದ್ದಾರೆ. ಟೆಕಿಟಸ್ ಹೇಳುತ್ತಾರೆ ಕ್ರಿಸ್ಟಸ್ (ಕ್ರೈಸ್ತನಿಗೆ ಲಾಟನ್ ಭಾಷೆಯಲ್ಲಿ) ಕ್ರೈಸ್ತ ಧರ್ಮದ ಮೂಲವೆಂದು ಆತನನ್ನು ಪಾಂಟಿಯಸ್ ಪಿಲಾಟಸ್ (ಪಿಲಾತ)ನು ಮರಣ ದಂಡನೆ ವಿಧಿಸಿದನೆಂದು

ಗೈಯಿಸ್ ಸುಯಟೊನಿಯಸ್ ಟ್ರಾಂಕಲಸ್, ಹೆಡ್ರಿಯನ್ ಅರಸನು ಮುಖ್ಯ ಕಾರ್ಯದರ್ಶಿ, ಇವರು ಕೂಡ ಯೇಸುವಿನ ಬಗ್ಗೆ ಬರೆದಿದ್ದಾರೆ. ಕ್ರಿಸ್ತ ಸಕ 120 ರಲ್ಲಿ ಅವರು ಬರೆದಿದ್ದಾರೆ. "ರೊಮಾಪುರದಲ್ಲಿ ಕ್ರೈಸ್ಟಸ್ (ಕ್ರೈಸ್ತ)ನ ಕಾರಣವಾಗಿ ಬಿಡದೆ ಯಾರಾದರೂ

ತೊಂದರೆ ಕೊಡುತ್ತಿರುವ ಕಾರಣ ಅವರನ್ನು ಪಟ್ಟಣದಿಂದ ಹೊರಹಾಕಿದರೆಂದು''. ಕ್ರಿಸ್ತ ಸಕ 49 ರಲ್ಲಿ ರೋಮಪುರದಲ್ಲಿರುವ ಯೂದಾ ಸಮುದಾಯದಲ್ಲಿ ಗಲಾಟೆ ನಡೆದು ಅವರನ್ನು ಅಲ್ಲಿಂದ ಬಹಿಷ್ಕಾರ ಹಾಕಿದ ಸಂಗತಿಯ ಬಗ್ಗೆ ಸುಯಟೊನಿಯಸ್ ವಿವರಿಸುತ್ತಾರೆ.

ಫ್ಲೆವಿಯಸ್ ಜೊಸೆಫಸ್ ಒಬ್ಬ ಯೂದ ಇತಿಹಾಸಗಾರ, ವೆಸ್ಪಿಸಿಯನ್ ಅರಸರ, ಅರಮನೆ ಇತಿಹಾಸಗಾರನಾದ (72 ಕ್ರಿಸ್ತಸಕದಲ್ಲಿ). ಅವರು ಯೇಸು, ಪಿಲಾತ, ಶಿಲುಬಿಗೆ ಹಾಕಿಸಿದ ಬಗ್ಗೆ ಮತ್ತು ಯೇಸು ತಾನೆ ಮೆಸ್ಸಿಯನೆಂದು ಹೇಳಿಕೊಳ್ಳುವ ಬಗ್ಗೆ ಬರೆದಿದ್ದಾರೆ. ಅವರು 97 ಕ್ರಿಸ್ತಸಕದಲ್ಲಿ ಮರಣ ಹೊಂದಿದರು.

ಇದರಂತೆಯೇ, ಬೇರೆ ಆಧಾರದ ವಿಷಯಗಳಿವೆ. ಮಾರಾ - ಸೆರಪಿಯನ್ ತನ್ನ ಮಗನಿಗೆ ಬರೆದ ವೈಯಕ್ತಿಕ ಪತ್ರದಲ್ಲಿಯು ಕೂಡ ಯೇಸುವಿನ ಬಗ್ಗೆ ಬರೆದಿದ್ದಾರೆ. ಯೇಸು ಕ್ರಿಸ್ತರ ಮತ್ತು ಅವರಿಗೆ ನಂಬಿಗಸ್ತನಾಗಿರುವ ಆತನ ಶಿಷ್ಯರ ಬಗ್ಗೆ ಪ್ಲೀನಿ ದಿ ಯಂಗರ್ (ಬಿತಿನಿಯಾದ ರಾಜ್ಯಪಾಲ) ಕ್ರಿಸ್ತಸಕ 112ರಲ್ಲಿ ಏಷಿಯ ಖಾಂಡದಲ್ಲಿ ತ್ರಾಜನ್ ರಾಜನಿಗೆ ಬರೆದ ಪತ್ರದಲ್ಲಿ ಯೇಸುವಿನ ಬಗ್ಗೆ ಬರೆದಿದ್ದಾರೆ. ತಾಲ್ಮುಡ್ ಯೇಸುವಿನ ಬಗ್ಗೆ ಬಹಳ ಸಾರಿ ವಿವರಿಸಿದ್ದಾರೆ. ಲೂಸಿಯನ್ ಒಬ್ಬ ಗ್ರೀಕ್ ಟೀಕಿಸುವ ಲೇಖಕ, ಯೇಸುವಿನ ಬಗ್ಗೆ ಮತ್ತು ಕ್ರೈಸ್ತರ ಬಗ್ಗೆ ಹಾಸ್ಯಮಯವಾಗಿ ಬರೆದಿದ್ದಾರೆ (ಕ್ರಿಸ್ತ ಸಕ 170ರಲ್ಲಿ). ಇದೆಲ್ಲ ಕ್ರೈಸ್ತ ಧರ್ಮ ಸೇರಿದ ಕೃತ್ಯಗಳಲ್ಲ ಇಲ್ಲಿರುವ ಪಟ್ಟಿಯಲ್ಲಿ ಕ್ರೈಸ್ತರು ಬರೆದ ಪುಸ್ತಕಗಳಿಲ್ಲ.

ಇತಿಹಾಸದಲ್ಲಿ ನಿಜವಾಗಿ ಯೇಸು ಜೀವಂತರಾಗಿದ್ದರು ಎಂಬ ಸಂಶಯವೆ ಇಲ್ಲ. ಅವರು ಪಾಲಸ್ತೀನ ದೇಶದಲ್ಲಿ ವಾಸವಾಗಿದ್ದರು. ಅವರು ಒಂದು ತರಹದ ಕದಡ ಎಬ್ಬಿಸಿದರು... ಸಾವಿರಾರು ಜನರ ಜೀವನ ಅವರಿಂದ ಪರಿಣಾಮ ಬೀರಿದವು. ಯಾರಿಗಾದರೂ, ನಾನು ಯೇಸುವನ್ನು ನಂಬುವುದಿಲ್ಲವೆಂದು ಹೇಳಲು ಸ್ವತಂತ್ರವಿದೆ. ಆದರೆ ಯಾವ ಇತಿಹಾಸಗಾರನು ಇವರು ಪುರಾಣ ಕಥೆ ಮಾತ್ರವೆಂದು ಹೇಳುವುದಿಲ್ಲ. ಆಬ್ರಾಹಮ್ ಲಿಂಕನ್ ಅಥವಾ ಮಹಾತ್ಮಗಾಂಧಿ ಇತಿಹಾಸದಲ್ಲಿ ಎಷ್ಟು ನಿಜವೊ ಅಷ್ಟೆ ನಿಜ ಯೇಸು ಕೂಡ.

ಅಧ್ಯಾಯ - 2

# ಹೊಸ ಒಡಂಬಡಿಕೆಯ ಹಿನ್ನಲೆ

ಟೀಕೆಗಾರರು ಹೇಳುವುದೇನೆಂದರೆ............

ಯೇಸು ಚರಿತ್ರೆಯುಳ್ಳ ವ್ಯಕ್ತಿ ಎಂಬ ಸತ್ಯವು ಕಚಿತವಾದುದರಿಂದ, ನಾವು ಇಂದು ಆತನ ಜೀವನಕ್ಕೆ ಸಾಕ್ಷಿಯಾಗಿರುವ ಹೊಸ ಒಡಂಬಡಿಕೆಯು ಎಷ್ಟು ಸತ್ಯ ಎಂಬುದನ್ನು ಪರೀಕ್ಷಿಸಬೇಕು.

ವಚನಗಳು ಎಷ್ಟರ ಮಟ್ಟಿಗೆ ನಿಜವಾಗಿದೆ? ನಾವು ಅವರು ಹೇಳುವುದನ್ನು ನಂಬಬಹುದೆ? ಇಂದು ನೀವು ಏಕೆ ಯೇಸುವನ್ನು ವಿಶ್ವಾಸಿಸುತ್ತೀರ ಎಂದು ಪ್ರಶ್ನಿಸಿದರೆ. ಅನೇಕ ಜನರ ಉತ್ತರವು ಈ ರೀತಿಯಾಗಿದೆ, ಏಕೆಂದರೆ ಅವರು ಅಧ್ಭುತಗಳನ್ನು ಮಾಡಿದರು. ಅವರು ನೆರವೇರಿದ ಪ್ರವಾದನೆಗಳನ್ನು ಅಥವಾ ಪುನರುತ್ಥಾನಗೊಂಡ ಸತ್ಯವನ್ನು ಹೇಳಬಹುದು.

ಆದರೆ ಒಬ್ಬನು ಈ ಮೇಲ್ಕಂಡ ವಿಷಯಗಳನ್ನು ಎಲ್ಲಿಂದ ಕಲಿಯುತ್ತಾನೆ? ಅಧ್ಭುತಗಳೆ ಆಗಲಿ, ನೆರವೇರಿದ ಪ್ರವಾದನೆಗಳೆಯಾಗಲಿ ಅಥವಾ ಪುನರುತ್ಥಾನವೇಯಾಗಲಿ, ಇದರ ಬಗ್ಗೆ ಮಾಹಿತಿ ನೀಡುವ ಪ್ರಾಥಮಿಕ ಮೂಲ ಹೊಸ ಒಡಂಬಡಿಕೆ. ಇಂತಹ ಹೊಸ ಒಡಂಬಡಿಕೆಗೆ ಬೆಲೆಕೊಡದಿದ್ದರೆ ವಿಶ್ವಾಸಿಗಳು ಮೃದುವಾದ ಮಂಜಿನ ಕಟ್ಟೆಯ ಮೇಲೆ ನಿಂತ ಹಾಗೆ ಹೋಲಿಸಬಹುದು. ಈ ಪ್ರಾಥಮಿಕ ಮೂಲವನ್ನೇ ಅನೇಕ ಶತಮಾನಗಳ ಹಿಂದೆ ಸತ್ಯವೇಧದ ಟೀಕೆಗಾರರು ದಾಳಿ ಮಾಡುತ್ತಿದ್ದರು. ಆಕ್ರಮಿಸುತ್ತಿದ್ದರು. ಹೊಸ ಒಡಂಬಡಿಕೆಯನ್ನು ಯೇಸುವಿನ ಮರಣದ ನಂತರ 150 ರಿಂದ 200 ವರ್ಷಗಳ ನಂತರ ಬರೆದಿದ್ದಾರೆ ಹಾಗೂ ಇಷ್ಟು ಕಾಲಾಂತರದ ಕಾರಣವಾಗಿ ಸತ್ಯವೇಧ ವಚನಗಳನ್ನು ವಿಶ್ವಾಸಿಸುವುದು ಅಸಾಧ್ಯ ಎಂದು ಗೋಷಿಸುತ್ತಿದ್ದರು. ಈ ಹೊಸ ಒಡಂಬಡಿಕೆ ಬರೆದುದಕ್ಕೆ ಪ್ರತ್ಯಕ್ಷ ಸಾಕ್ಷಿಯಿಲ್ಲ ಏಕೆಂದರೆ ತಡವಾಗಿ ಬರೆದ ಕಾರಣದಿಂದಾಗಿ. ಈ ಕಾಲಾಂತರವು ಹೊಸ ಒಡಂಬಡಿಕೆಯನ್ನು ಕಪಟ ದಾಖಲೆಯಾಗಿ ಮಾಡಿರಬಹುದು ಎಂದು ಸಾರಿದರು. ಮತ್ತೊಂದು ವಿಷಯವೇನೆಂದರೆ-ರೂಢಿಯಾದ ಸಂಪ್ರದಾಯಗಳು ಗೊಂದಲಗೊಂಡು ಅರ್ಧ ಸತ್ಯಗಳ ಜೊತೆ ಬೆರೆತುಕೊಂಡಿತು ಎಂದು ನಂಬುತ್ತಾರೆ. ಹೇಗೆ ಯಾರಾದರು ಈ ರೀತಿಯಾದ ಕಪಟವನ್ನು ಸರಿಮಾಡಿಸುವುರು? ಸ್ವಲ್ಪ ಜನರು ಏನೆಂದುಕೊಂಡರೆಂದರೆ ಮಧ್ಯಕಾಲದಲ್ಲಿ ಬೇಸರಗೊಂಡ ಮುನಿಗಳು ಅವರಿಗೆ ಇಷ್ಟವಾದ ಕೆಲವು ಅಧ್ಭುತಗಳನ್ನು ಹೊಸ ಒಡಂಬಡಿಕೆಯಲ್ಲಿ ಸೇರಿಸಿರಬಹುದು ಎಂದು ನಂಬುತ್ತಾರೆ.

ಶಿಷ್ಯರು ನಿರಾಸರಾಗಬೇಕಿಲ್ಲಾ. ಇಂತಹ ಪ್ರಶ್ನೆಗಳು ಶೇಕಡ 50 ವರ್ಷ ಹಿಂದಿನದ್ದು ಮತ್ತು ಬೆಲೆಯಲ್ಲದ್ದು.

ಈ ಪ್ರಶ್ನೆಯನ್ನು ಕ್ಷಣದಲ್ಲಿ ಉತ್ತರಿಸುತ್ತೇವೆ. ಅದಕ್ಕೆ ಮುಂಚೆ ಎರಡನೆಯ ಪ್ರಶ್ನೆಯೇನೆಂದರೆ ಸತ್ಯವೇದದ ವಚನಗಳು ಮೊದಲನೆಯ ಶತಮಾನದ ಮಧ್ಯದಲ್ಲೇ ಬರೆದದ್ದು ಎಂದು ನಿರೂಪಿಸಿದನಂತರ ಬರುವ ಪ್ರಶ್ನೆ ಅದೇ ಮೂಲ ಪ್ರಾಥಮಿಕ ಕೈ ಬರಹವನ್ನು (Manuscript) ಎಷ್ಟರ ಮಟ್ಟಿಗೆ ನಂಬಬಹುದು? ಎಂದು.

ಈ ಮೂಲ ಪ್ರಾಥಮಿಕ ಕೈ ಬರಹ ಒಂದು ಸಾವಿರ ವರ್ಷದನಂತರ ಬಂದ ದಾಖಲೆ ಹಾಗೂ ಆದಕಾರಣದಿಂದಾಗಿ ಇದರಲ್ಲಿ ಕಳಂಕವಿರಬಹುದು ಎಂದು ಹೇಳಿದ್ದಾರೆ, ಆಗ ಯೇಸುವಿನ ಮೇಲಿರುವ ನಮ್ಮ ವಿಶ್ವಾಸವು ಪ್ರಶ್ನಿಸುವಂತಹ ನಿಬಂಧನೆ ದಾಖಲೆಯಾಗುತ್ತದೆ. ಈ ರೀತಿಯಾಗಿ ಮೂಲ ಪ್ರಾಥಮಿಕ ಕೈ ಬರಹ ಒಂದು ಸಾವಿರ ಕ್ರೈಸ್ತ ನಂತರ (100 A.D.) ಬರೆದುದಾಗಿದ್ದರೆ ಇದರಲ್ಲಿ ಅನೇಕ ವಿಷಯಗಳು ಕಪಟತನಕ್ಕೆ ಒಳಪಡುತ್ತದೆ. ಇದು ಯಾವಾಗ ಸಾಧ್ಯವೆಂದರೆ ನೋಡಿ ಬರೆಯುವರು"Copy Writers" ಆಗತ್ಯವಾದ ಗಮನ ಸಾರದಿದ್ದ ಪಕ್ಷದಲ್ಲಿ ಮಾತ್ರ ಸಾಧ್ಯ ಆದ ಪಕ್ಷದಲ್ಲಿ ನಾವು ಕಂಡಿತವಾಗಿಯು ಸಣ್ಣದಾದ ಮಂಜಿನ ಕಟ್ಟೆಯ ಮೇಲೆ ಓಡಾಡುತ್ತಿರುತ್ತೇವೆ ಎಂಬ ಹೋಲಿಕೆ ಮಾಡಬಹುದು.

ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಇಂತಹ ಟೀಕೆಯನ್ನೇ ಅನೇಕ ವಿದ್ವಾಂಸರು ಕಲಿಸುತ್ತಿದ್ದರು. ಕೆಲವು ಜನರು ಇಂದಿಗೂ ಈ ಪ್ರಶ್ನೆಗಳನ್ನು ಕೇಳುತ್ತಾರೆ. ಇವರು ಹೊಸ ಒಡಂಬಡಿಕೆಯನ್ನು ನವೀನ ದಾಖಲೆಯಾಗಿ ಪರಿಗಣಿಸುತ್ತಾರೆ. ಇವರು ''ಮೂಲ ಪ್ರಾಥಮಿಕ ಕೈ ಬರಹ''ವನ್ನು ಬಲಹೀನವಾದದ್ದು ಮತ್ತು ನಂಬಿಕೆಗೆ ಪಾತ್ರವಿಲ್ಲದ್ದು ಎಂದು ಗೋಷಿಸುತ್ತಾರೆ. ಇವೆಲ್ಲಾ ಕೇಳುವುದಕ್ಕೆ ಹೊಸದಾಗಿರಬಹುದು. ಇಂತಹ ರೀತಿಯ ಅನೇಕ ಶಿಕ್ಷಣವು ಅಮೇರಿಕಾ ಮತ್ತು ಐರೋಪಿಯ ದೇಶದ ವಿಶ್ವವಿದ್ಯಾಲಯಗಳಲ್ಲೆ ಭೋದಿಸುತ್ತಾರೆ. ನೀವು ಸಹ ಈ ರೀತಿಯಾದ ವಿಷಯಗಳನ್ನು ಕೇಳಿರಬಹುದು.

ಈ ರೀತಿಯಾದ ಸತ್ಯವೇಧ ಮೇಲೆ ದಾಳಿ ಅಧಿಕವಾಯಿತು. ಈ ನಡುವೆ ಸ್ವಲ್ಪ ಜನ ಅಗತ್ಯವಿಲ್ಲದೆ ತಮ್ಮ ವಿಶ್ವಾಸವನ್ನು ಕಳೆದುಕೊಂಡರು. ಕ್ರೈಸ್ತ ಸಾಕ್ಷಿಗೆ ಹೊಸ ಒಡಂಬಡಿಕೆ ಮುಖ್ಯವಾದ ಅಂಗವಾಗುತ್ತದೆ. ಯಾವಾಗಲೂ ಪ್ರತ್ಯಕ್ಷ ಸಾಕ್ಷಿ ಬಹಳ ಮುಖ್ಯವಾಗುತ್ತದೆ. ''ಕುರುಡು ನಂಬಿಕೆ''ಯೇ ಬೇಕಾದಷ್ಟು ವಿಶ್ವಾಸಿಸುವುದಕ್ಕೆ ಎಂದು ತಿಳಿಯಬಹುದು ಆದರೆ ಅನೇಕರು ಸರಿಯಾದ ಉತ್ತರ ದೊರೆತರೆ ಬಹಳ ಉತ್ಸಾಹಗೊಳ್ಳುತೇವೆ ಹಾಗೂ ಆ ಉತ್ತರವನ್ನು ಇನ್ನೊಬ್ಬರಲ್ಲಿ ಹಂಚಿಕೊಳ್ಳಲು ಉತ್ಸಾ ಪಡುತ್ತೇವೆ. ಆದರೆ ಒಳ್ಳೆಯ ವಿಷಯವೇನೆಂದರೆ ಸತ್ಯವೇದವನ್ನು ನಂಬಲು ಹಾಗೂ ಅದೊಂದು ಚರಿತ್ರಿಕ ದಾಖಲೆಯೆಂಬುದಾಗಿದೆ ಎನ್ನಲು ಪರ್ವತದಷ್ಟು ಸಾಕ್ಷಿಗಳಿವೆ. ''Archocology'' ಪ್ರಾಚೀನ ಕಾಲದವಸ್ತುಗಳ ಶೋಧಕ ವಿಜ್ಞಾನ/ಶಾಸ್ತ್ರ ಹಾಗೂ ಶ್ರೀಮಂತ ಬರಹ ದಾಖಲೆಗಳು 150 ವರ್ಷಗಳ ಹಿಂದೆ ಕಂಡುಹಿಡಿದಿರುವ ಉನ್ನತ

ಸಾಕ್ಷಿಗಳಾಯಿತು. ಇವು ಅನೇಕ ಟೀಕೆಗಾರರನ್ನು ವಿಶ್ವಧಿಸಿತು. ಇಲ್ಲಿಂದ ಇದು ತುಂಬ ರಸಮಯವಾದ ಕಥೆ. ಆದುದ್ದರಿಂದ ಇದರ ಬಗ್ಗೆ ಹಾಗೂ ಇದರ ಹಿನ್ನಲೆಯನ್ನು ನೋಡೋಣವೆ...

## ಹಿನ್ನಲೆ

ಸತ್ಯವೇದದ ಯಾಂತ್ರಿಕ ಪರಿನಿತರು ಮಾಶೆಯನ ಕಾಲದಲ್ಲಿ ಅಂದರೆ 1400 ಕ್ರಿಸ್ತಪೂರ್ವದಲ್ಲಿ ''Alphobetical'' ಅಂದರೆ ಅಕ್ಷರ ಕ್ರಮ ಸಾಲಿನಲ್ಲಿ ಬರೆಯುವ ಪದ್ದತ್ತಿ ಇಲ್ಲವೆಂದು ಹೇಳುತ್ತಿದ್ದರು. ಆದರೆ ಪರಿಶೋಧಿಸಿದಾಗ ಸತ್ಯ ಬೇರೆ ರೀತಿಯಾಗಿತ್ತು ''Archeologiete'' ಪ್ರಾಚೀನ ಕಾಲದ ವಸ್ತುಗಳೆ ಶೋಧಕ ಶಾಸ್ತ್ರದ ನಿಪುಣರು ಕಂಡು ಹಿಡಿದುದೇನೆಂದರೆ ಅಕ್ಷರ ಕ್ರಮ  ಸಾಲಿನಲ್ಲಿ ಬರೆಯುವುದು ಮಾಶೆಯನ್ನು ಹುಟ್ಟುವುದಕ್ಕಿಂತ 400 ವರ್ಷಗಳ ಹಿಂದೆಯೆ ಈಜಿಪ್ತ ದೇಶದಲ್ಲಿ ರೂಡಿಯಲ್ಲಿತ್ತು. ಈ ನಿಪುಣರು ಕಚಿತಪಡಿಸಿದ ಮತ್ತೊಂದು ವಿಷಯವೇನೆಂದರೆ ಸಮೇರಿಯ ದೇಶದವರು ಮಾಶೆಯನ ಕಾಲದ 2000 ವರ್ಷಗಳ ಮುಂಚೆಯೆ ಈ ರೀತಿ ಬರೆಯುತ್ತಿದ್ದರು. ಈಜಿಪ್ತ ಜನರು ಕ್ರಿ.ಪೂ. 3000 ವರ್ಷಗಳ ಹಿಂದೆಯೆ ಸೈರೊಗ್ರಾಫಿಕ್ಸ್ ಎಂಬ ಬರೆಯುವ ನಿಯಮವನ್ನು ಕಲ್ಪಿಸುತ್ತಿದ್ದರು. ನಮ್ಮಲ್ಲಿ ಪಾಲೆಸ್ಟಿನ್ ದೇಶದ ರಾಜ್ಯಪಾಲರುಗಳು ಮಾಶೆಯನ ಕಾಲದಲ್ಲಿ ನಾನರು ನಗರಗಳಿಗೆ ಬರೆದ ಪತ್ರಗಳು ಇವೆ. ಈ ಪತ್ರಗಳು ಈಜಿಪ್ತ ದೇಶದ ರೀತಿಯಾಗಿ ಪರಿಗಣಿಸುತ್ತದೆ. ಇನ್ನೊಂದು ವಿಷಯ ನಾವು ಗಮನಿಸಬೇಕಾದುದೇನೆಂದರೆ ಮಾಶೆಯನ್ನು ಫಾರೋಹಿನ ಆಲಯದಲ್ಲಿ ಬೆಳೆದ ಕಾರಣದಿಂದ ಕಂಡಿತವಾಗಿಯು ಅಕ್ಷರಸ್ತನಾಗಿದ್ದನ್ನು.

ಪ್ರಾಚೀನ ಕಾಲದವರು ಅನೇಕ ರೀತಿಯಾದ ವಸ್ತುಗಳ ಮೇಲೆ ಬರೆಯುತ್ತಿದ್ದರು. ಕಲ್ಲಿನಲ್ಲಿ ಕೆತ್ತುವುದು ಅನೇಕ ವರ್ಷಗಳಿಂದ ಹಾಗೂ ಅನೇಕ ಪದ್ಧತಿಗಳಿಂದ ಬಂದಿವೆ. ''ಬೆಹಸ್ಥಿನ್'' ಶೈಲಿಯ ಕೆತ್ತವಿಕೆ ಖಿರಾನ್ ದೇಶದಿಂದ ಬಂದಿತು. ಉದಾಹರಣೆಗೆ ಒಂದು ದೊಡ್ಡ ಕಲ್ಲಿನಲ್ಲಿ ಮೂರು ಭಾಷೆಗಳಲ್ಲಿ ಕೆತ್ತಲ್ಪಟ್ಟಿರುವ ವಿಷಯ. ಅದರಲ್ಲಿ ಜೆರಾಕ್ಸ್ ಹಾಗೂ ಡೇರಿಯಸ್ ಎಂಬ ಸತ್ಯವೇದದಲ್ಲಿರುವ ಹೆಸರುಗಳನ್ನು ಗಮನಿಸಬಹುದು. ಜೆರಾಕ್ಸ್ ಎಸ್ತರ್ ಅವರ ಗಂಡನೆಂದು ನಮಗೆ ಹಳೆಯ ಒಡಂಬಡಿಕೆಯಿಂದ ಚೆನ್ನಾಗಿ ಪರಿಚಯವಿದೆ. ಚರಿತ್ರೆಯ ಸ್ಪಷ್ಟತೆಯನ್ನು ಹೇಗೆ ಪ್ರಾಚೀನ ಕಾಲದ ವಸ್ತು ಶೋಧನೆ ಶಾಸ್ತ್ರ ಕಚಿತಪಡಿಸುತ್ತದೆ ಎಂಬುದಕ್ಕೆ ಇದೇ ಉನ್ನತ ಉದಾಹರಣೆಯಾಗಿದೆ.

ಕಲ್ಲಿನ ನಂತರ ಪ್ರಾಚೀನ ಕಾಲದಲ್ಲಿ ಜನರು ಜೇಡಿ ಮಣ್ಣನ್ನು ಉಪಯೋಗಿಸುತ್ತಿದ್ದರು. ಅನೇಕ ಪ್ರಾಚೀನ ಕಾಲದ ವಾಚನಾಲಯಗಳಲ್ಲಿ ಜೇಡಿ ಮಣ್ಣಿನ ಹಲಗೆಯನ್ನೇ ಕಾಗದದ ಹಾಗೆ ಉಪಯೋಗಿಸುತ್ತಿದ್ದರು. ಈ ವಾಚನಾಲಯಗಳು ಕಾಲಾಂತರದಲ್ಲಿ ಭೂಮಿಯಲ್ಲಿ

ಹೊತುಹೋಗಿತ್ತು. ಇದನ್ನು ಪ್ರಾಚೀನ ಕಾಲದ ವಸ್ತು ಶೋಧಕ ಶಾಸ್ತ್ರದ ನಿಪುಣರು ಕಂಡು ಹಿಡಿದರು.

''ಎಬ್ಲಾ'' ರಾಜ್ಯದ ವಾಚನಾಲಯದ ಜೇಡಿ ಮಣ್ಣಿನ ಹಲಗೆಯ ಕೃತಿಗಳು ಅನೇಕ ಹಳೆಯ ಒಡಂಬಡಿಕೆಯ ನಗರಗಳನ್ನು ಸ್ಪಷ್ಟಪಡಿಸುತ್ತದೆ. ಇದರಲ್ಲಿ ಉರ್, ಜೊಪ್ಪಾ ಮತ್ತು ಗೆಝಾ ರಾಜ್ಯಗಳು ಮಾತ್ರವಲ್ಲ ಅಲ್ಲಿರುವ ನಗರಗಳ ನಡುವೆ ನಡೆದ ವ್ಯವಹಾರಿಕ ಸಂಬಂಧಗಳು ಸುಳಿವುಗಳನ್ನು ಶೇಖರಿಸಿ ಕಚಿತಪಡಿಸುತ್ತದೆ. ಇದರಲ್ಲಿ ಸೋದಮ್ ಮತ್ತು ಗೊಮಾರೊ ಸ್ಪಷ್ಟಪಡಿಸಲಾಗಿದೆ.

ಅನೇಕ ಬೇರೆ ವಾಚನಾಲಯುಗಳನ್ನು ಕಂಡುಹಿಡಯಲಾಗಿದೆ. ಇವುಗಳು ಹಳೆಯ ಒಡಂಬಡಿಕೆಯಲ್ಲಿರುವ ಅನೇಕ ಪದ್ಧತಿಗಳ ಅಸ್ತಿತ್ವವನ್ನು ಕಚಿತಪಡಿಸುತ್ತದೆ.

ಕಟ್ಟೆ (Wood) ಮತ್ತು ತೊಟ್ಟಿ (Pottery)ಗಳನ್ನು ಸಹ ಬರೆಯಲು ಉಪಯೋಗಿಸುತ್ತಿದ್ದರು. ತೊಟ್ಟಿಗಳ ತುಂಡುಗಳನ್ನು ಏನಾದರು ಸಣ್ಣ ವಿಷಯ ಬರೆಯಲು ಅಥವಾ ರಸೀಧಿ ನೀಡಲು ರಸೀಧಿಯಾಗಿ ಉಪಯೋಗಿಸುತ್ತಿದ್ದರು. ಕಾಗದವು ಆ ಸಮಯದಲ್ಲಿ ಸಮರ್ಪನೆಯಾಗಿರಲಿಲ್ಲಾ. ಕಾಗದವು ಚೀನಾ ದೇಶದಲ್ಲಿ ಕಂಡುಹಿಡಯಲ್ಪಟ್ಟವು. ಇದು ಅನೇಕ ಶತಮಾನಗಳ ನಂತರ ಮಧ್ಯಪೂರ್ವ ದೇಶಗಳಿಗೆ ತಲುಪಿತು. ಇದು ಕ್ರಮೇಣ ಕ್ರಿ.ನ 1000 (A.D.) ವರ್ಷಗಳ ತನಕ ಸಮರ್ಪನೆಯಾಗಿರಲ್ಲಿಲ್ಲಾ.

ಹಳೆಯ ಒಡಂಬಡಿಕೆ ವಚನಗಳನ್ನು ತಯಾರಿಸಲ್ಪಟ್ಟ ಪ್ರಾಣಿಗಳ ಚರ್ಮದ ಮೇಲೆ ಬರೆಯುತ್ತಿದ್ದರು - ಯಾವ ಜನರು ದೇವರ ವಚನವನ್ನು ಬರೆಯುವಾಗ ಕೆಲವು ನೀತಿ ನಿಯಮಗಳನ್ನು ಪಾಲಿಸುತ್ತಿದ್ದರು.

ತಯಾರಿಸಲ್ಪಟ್ಟ ಕುರಿ ಅಥವಾ ಮೇಕೆಯ ಚರ್ಮವನ್ನು ''ಪಾರ್ಚಮೆಂಟ್ಸ್'' ಎಂದು ಕರೆಯುತ್ತಿದ್ದರು. ಇತಂಹ ಉನ್ನತ ತಯಾರಿಸ್ಪಟ್ಟ ಚರ್ಮಗಳ ದೇವರ ವಚನ ಬರಹಗಳನ್ನು ಸಾವಿರಾರು ವರ್ಷದಿಂದ ಕಾಪಾಡಿಕೊಂಡು ಬಂತು.

''ಪೇಪಿರಸ್'' ಇದು ಕಾಗದ ಹಾಗೆ ಇರುವ ವಸ್ತು ಕ್ರೈಸ್ತ ಪೂರ್ವ ಮತ್ತು ಕ್ರೈಸ್ತನಂತರ ಬಹಳ ಪ್ರಸಿದ್ಧಿಯಾಗಿದ್ದ ವಸ್ತು.

''ಪೇಪಿರಸ್'' ಕಾಗದವಲ್ಲಾ ಆದರೆ ಕಾಗದ ಹಾಗೆಯಿತ್ತು. ಇದನ್ನು ''ರೀಡ್'' ಎಂಬ ಗಿಡದಿಂದ ಮಾಡಲಾಗಿತ್ತು, ಈ ಗಿಡವು ನೈಲ್ ನದಿಯ ತೀರದಲ್ಲಿ ಬೆಳೆಯುತ್ತಿತ್ತು. ಈ ಗಿಡವು ಈಜಿಪ್ತ್ ದೇಶದಲ್ಲಿ ಬೆಳೆಯುತಿತ್ತು. ಈ ಗಿಡವು ಈಜಿಪ್ತ್ ದೇಶದಲ್ಲಿ ದೊಡ್ಡ ವ್ಯವಹಾರವಾಗಿತ್ತು. ಈ

ಗಿಡವು ಇಂದಿಗು ಈಜಿಪ್ಟ್ ದೇಶದಲ್ಲಿ ಬೆಳೆಯುತ್ತಿದೆ, ಇದು 12 ರಿಂದ 15 ಅಡಿ ಎತ್ತರವಿದೆ, ಗಿಡವು ಮನುಷ್ಯನ ಅಂಗೈನಷ್ಟೆ ದಪ್ಪವಾಗಿ ಬೆಳೆಯುತ್ತದೆ. ಈ ''ಪೇಪಿರಸ್'' ಬಹಳ ಪ್ರಸಿದ್ಧವಾಗಿ ಅಂತರಾಷ್ಟ್ರಿಯ ಮಾಧ್ಯಮವಾಗಿ ಮಾನ್ಯತೆ ಪಡೆದು ಗ್ರೀಸ್ ಮತ್ತು ರೋಮ್ ದೇಶದಲ್ಲಿ ಇವುಗಳಿಂದ ಪುಸ್ತಕಗಳನ್ನು ಮಾಡಲಾರಂಭಿಸಿದರು.

ಸಣ್ಣ ಸಣ್ಣ ದಾಖಲೆಗಳು ಪುಟದ ರೀತಿಯಲ್ಲಿ ಬರುತ್ತಿತ್ತು. ಉದ್ದವಾದ ದಾಖಲೆಗಳನ್ನು ಉದ್ದಕ್ಕೆ ಎಳೆದು ಎರಡು ಕಡೆಯಿಂದಲೂ ಉರುಳಾಗಿ ಮಡಿಚಿ ಓಲೆಯಾಗಿ ಇಡುತ್ತಿದ್ದರು. ಪೇಪಿರಸ್ ಓಲೆ ಶೇಖಡ 30 ಅಡ್ಡಿ ಉದ್ದ ಇರುತ್ತಿತ್ತು. ಇದಕ್ಕಿಂತ ಅಧಿಕ ಮಾಡಿದರೆ ಅದನ್ನು ಓಲೆಯಾಗಿ ಮಡಿಚಲಾಗದು. ಇದರ ಕಾರಣದಿಂದಾಗಿಯೇ ಹೊಸ ಒಡಂಬಡಿಕೆಯ ಊತ ಮತ್ತು ಅಪೋಸ್ಥಿಲರ ಕೃತ್ಯಗಳು ಬಿಡಿಯಾಗಿ ಬರೆದಿದ್ದಾರೆ. ಅದನ್ನು ಒಟ್ಟಾಗಿ ಒಂದೇ ಓಲೆಯಲ್ಲಿ ಬರೆದಿದ್ದರೆ ಮಡಿಚಲಾಗದಿತ್ತು.

ಕ್ರೈಸ್ತನ ಕಾಲದಲ್ಲಿಯೇ ಈ ಓಲೆಗಳು ''ಕೋಡೆಕ್ಸ್'' (Coder) ರೀತಿ ಅಥವಾ ಪುಸ್ತಕ ಆಕಾರಕ್ಕೆ ದಾರಿನೀಡಿತು. ನಾವು ಕಲ್ಪಿಸುವ ಹಾಗೆಯೇ ''ಕೋಡೆಕ್ಸ್'' ರೀತಿ ಎರಡು ಕಡೆಯ ಓಲೆಯನ್ನು ರೆಟ್ಟು ಹಾಕಿದ ರೀತಿ ಇತ್ತು. ಇದೇ ಮೊಟ್ಟಮೊದಲು ಪುಸ್ತಕ. ಈ ''ಕೋಡೆಕ್ಸ್'' ರೀತಿ ಸರಳವಾಗಿದ್ದ ಕಾರಣದಿಂದಾಗಿ ಅನೇಕ ಕ್ರೈಸ್ತರು ಈ ರೀತಿ ಬರೆಯಲು ರೂಡಿಮಾಡಿದರು ಮತ್ತು ಯೂದ ಜನರು ''ಓಲೆ'' ರೀತಿಯನ್ನು ಕ್ರೈಸ್ತ ಹೋಗಿ ಅನೇಕ ಶತಮಾನಗಳ ನಂತರವೂ ರೂಡಿಯಲ್ಲಿಟ್ಟರುತ್ತಾರೆ.

''ಪೇಪಿರಸ್'' ನಲ್ಲಿದ್ದ ದಾಖಲೆಗಳು ಬಹಳ ಸೂಕ್ಷ್ಮವಾದದ್ದು ಇದನ್ನು ಮುಚ್ಚಲ್ಪಟ್ಟ ಗವಿಯಲ್ಲೊ ಅಥವಾ (ಮಡಿಕೆಯಲ್ಲೆ) ಒಣೆದೆ ವಾತವರಣದಲ್ಲಿ ಮಾತ್ರ ಜೋಪಾನವಾಗಿಡಲು ಸಾಧ್ಯ ಈ ರೀತಿಯಾದ ಪರಿಸರಕ್ಕೆ ಈಜಿಪ್ಟ್ ಮತ್ತು ಮಧ್ಯಪೂರ್ವ ದೇಶಗಳೇ ಸರಿಯಾದ ಜಾಗ. ಅನೇಕ ಪೇಪಿರೈಗಳನ್ನು ಈಜಿಪ್ಟ್ ದೇಶದಲ್ಲೇ ಕಂಡುಹಿಡಿಯಲ್ಪಟ್ಟವು.

ಹೊಸ ಒಡಂಬಡಿಕೆಯ ಪುಸ್ತಕಗಳು ''ಪೇಪಿರಸ್''ನಲ್ಲಿ ಬರೆದಿರುತ್ತಾರೆ. ಇವುಗಳು ಮೊದಲನೆಯ ಶತಮಾನ ಕ್ರೈಸ್ತರು ಇರುವವರೆಗೆ ಜೋಪಾನವಾಗಿತ್ತು ಹಾಗೂ ನಂತರ ಅವರ ಜೊತೆಯಲ್ಲೇ ನಾಶವಾಯಿತು. ಆದುದ್ದರಿಂದಲೇ ಅಸಲಿ ದಾಖಲೆಗಳು ನಮ್ಮಲ್ಲಿ ಇಲ್ಲಾ. ನಂತರ (300 ವರ್ಷಗಳ) ''ವೆಲ್ಲುಮ್'' ''ಕೋಡೆಕ್ಸ್'' ಆಕಾರದ ರೀತಿಯ ಪದ್ದತಿ ಬಹಳ ಪ್ರಸಿದ್ಧವಾಯಿತು. ಇದೇ ಹೊಸ ಒಡಂಬಡಿಕೆಯ ಆಕಾರಕ್ಕೆ ಮೂಲವಾಯಿತು. ಇವುಗಳು ಪೇಪಿರೈಗಿಂತ ಬಾಳಿಕೆಯಲ್ಲಿ ಉನ್ನತವಾಗಿತ್ತು. ಆದುದರಿಂದಲೇ ಪ್ರಾರಂಭದ ಸಭೆಗಳು ಅಪೊಸ್ತಲರ ಬರಹಗಳನ್ನು''ವೆಲ್ಲುಮ್'' ರಿಂದ ಬರೆಸಿ ಶೇಖರಿಸಿದರು. ಇಂದು ನಮ್ಮಲ್ಲಿರುವ ಹೊಸ

ಒಡಂಬಡಿಕೆಯ ಎರಡು ಬೆಲೆ ಬಾಳುವ ಪ್ರಾಥಮಿಕ ಕೈ ಬರಹಗಳು ಉನ್ನತ ''ವೆಲ್ಲುಮ್''ನಲ್ಲಿ ಬರೆದದ್ದು ಇದು ಕ್ರಿ.ನ. 325(A.D.) ನಲ್ಲಿ ಬರೆದದ್ದು.

''ಪೇಪಿರಸ್'' ತಯಾರಿಸಲ್ಪಟ್ಟ ಚರ್ಮ ಹಾಗೂ ಕಾಗದದ ಪ್ರಾಥಮಿಕ ಕೈ ಬರಹಗಳೇ ಇಂದಿಗೂ ಉಳಿದಿದೆ. ಇವೇ ಸತ್ಯವೇದಕ್ಕೆ ಬಲವಾದ ಸಾಕ್ಷಿಯನ್ನು ಹಾಗೂ ಸೂಕ್ಷ್ಮ ಸರಿತನ್ನು ಖಚಿತಪಡಿಸುತ್ತದೆ.

ಸತ್ಯವೇದವನ್ನು ಮೂರು ಭಾಷೆಗಳಲ್ಲಿ ಬರೆದಿದ್ದಾರೆ. ಅವು ಇಬ್ರಾಯ, ಅರಾಮಿಕ್ ಹಾಗೂ ಗ್ರೀಕ್.

ಇಡೀ ಹಳೆಯ ಒಡಂಬಡಿಕೆಯ ಇಬ್ರಾಯ ಭಾಷೆಯಲ್ಲಿ ಬರೆದಿದ್ದಾರೆ. ಇವನ್ನು ಬಲಗಡೆಯಿಂದ ಎಡಕ್ಕೆ ರೀತಿಯಲ್ಲಿ ಬರೆದಿದ್ದಾರೆ. ಈ ಭಾಷೆಯನ್ನು ಇಸ್ರಾಯಿಲ್ ದೇಶದಲ್ಲಿ ಇಂದಿಗೂ ಮಾತನಾಡುತ್ತಾರೆ.

ಇಬ್ರಾಯ ಭಾಷೆಗೆ ಸಮವಾದ ಮತ್ತೊಂದು ಭಾಷೆಯ ಅರಾಮಿಕ್ ಈ ಭಾಷೆಯನ್ನು ಪಾಲೆಸ್ಟಿನ್ ದೇಶದಲ್ಲಿ ಕ್ರಿ.ಪೂ. 500 ವರ್ಷದಿಂದ ಜನರ ಆಡು ಭಾಷೆಯಾಗಿತ್ತು. ದಾನಿಯಲ್ ಪುಸ್ತಕದ ಆರು (6) ಅಧ್ಯಾಯಗಳು ಮತ್ತು ಅಝ್ರಾ ಪುಸ್ತಕದ ನಾಲ್ಕು (4) ಅಧ್ಯಾಯಗಳು ಅರಾಮಿಕ್ ಭಾಷೆಯಲ್ಲಿ ಬರೆದಿದ್ದಾರೆ. ಹಾಗೂ ಹೊಸ ಒಡಂಬಡಿಕೆಯಲ್ಲಿ ಬರುವ 'ಅಬ್ಬಾ' 'ಮಾರಾನತಾ' ಮತ್ತು ''ಎಲಿ ಎಲಿ ಲಾಮ ಸಭ್ಕಾತನಿ'' ಎಂಬ ಪದಗಳು ಅರಾಮಿಕ್ ಭಾಷೆಯದು. ಈ ಭಾಷೆಯನ್ನು ಇಂದಿಗೂ ದಮಾಸ್‌ಕೆಸು ಸಿರಿಯಾ ಪ್ರಾಂತ್ಯದಲ್ಲಿ ಮಾತನಾಡುತ್ತಾರೆ.

ಗಮನಿಸಬೇಕಾದುದೇನೆಂದರೆ ಇಡೀ ಹೊಸ ಒಡಂಬಡಿಕೆಯು ಗ್ರೀಕ್ ಭಾಷೆಯಲ್ಲಿ ಬರೆದಿದ್ದಾರೆ. ಇವೆಲ್ಲವು ಅಲೆಕ್ಸಾಂಡರ್ ಎಂಬ ಅರಸನಿಂದ ಸಾಧ್ಯವಾಗಿತ್ತು. ಏಕೆಂದರೆ ಆತನೆ ಆ ಸಮಯದಲ್ಲಿ ಗ್ರೀಕ್ ಭಾಷೆಯನ್ನು ಸರ್ವದೇಶ ಸಮ್ಮತ ಭಾಷೆಯಾಗಿ ಮಾಡಿದನು. ಆ ಕಾಲದ ಆಡು ಭಾಷೆ ಗ್ರೀಕ್‌ನ್ನು ಮೊದಲನೆಯ ಶತಮಾನದಲ್ಲಿ ''ಕೊಯಿನ್'' ಗ್ರೀಕ್ ಎಂದು ಕರೆಯುತ್ತಿದ್ದರು. ಮೊದಲನೆಯ ಶತಮಾನದಲ್ಲಿ ಇದಕ್ಕೆ ಇದರದೇ ಆದ ಉಚ್ಚರಣೆ ಶೈಲಿ ಹಾಗೂ ಭಿನ್ನ ಭಾವಗಳಿತ್ತು. ಗ್ರೀಕ್ ಭಾಷೆಯನ್ನು ಇಂದಿಗೂ ಕೋಟ್ಯಾಂತರ ಜನರು ಮಾತನಾಡುತ್ತಾರೆ. ಅಕ್ಷರಗಲಾವು ಬದಲಾಗದೇ ಹಾಗೆಯೇ ಇಂದಿಗೂ ಅಳವಡಿಸುತ್ತಿದ್ದಾರೆ. ಆದರೆ ಮಾತನಾಡುವ ರೀತಿ ಉಚ್ಚರಣೆ ಈಗ ಬದಲಾವಣೆ ಹೊಂದಿಗೆ. ಅನೇಕ ಪದಗಳು ಇಂದಿಗೂ ಹಾಗೆಯೇ ಉಳಿದಿದೆ.

ಗಮನಿಸಬೇಕಾದುದೇನೆಂದರೆ ಆಂಗ್ಲ ಭಾಷೆಯ 500 ವರ್ಷಗಳಲ್ಲಿ ಬದಲಾವಣೆ ಹೊಂದಿದಕ್ಕಿಂತ, ಗ್ರೀಕ್ ಭಾಷೆಯ 2000 ವರ್ಷಗಳಲ್ಲಿ ಕಡಿಮೆಯಾಗಿ ಬದಲಾವಣೆ ಹೊಂದಿದೆ ಹೋಲಿಸಿದಾಗ.

ನನಗೆ ಜ್ಞಾಪಕವಿದೆ ನಾನು ವಿಶ್ವವಿದ್ಯಾನಿಲಯದಲ್ಲಿ ಗ್ರೀಕ್ ಓದುತ್ತಿರುವಾಗ ಅಧ್ಯಾಪಕರು ಒಮ್ಮೊಮ್ಮೆ ಗ್ರೀಸ್‌ನಲ್ಲಿ ವಿದ್ಯಾರ್ಥಿಗಳನ್ನು ಪಾಠವನ್ನು ಗಟ್ಟಿಯಾಗಿ ಓದಲು ಹೇಳುತ್ತಿದ್ದರು. ಇಂದಿನ ಉಚ್ಚರಣೆಗೂ ಅಪೋಸ್ತಲರ ಕಾಲದ ಉಚ್ಚರಣೆಗೂ ವ್ಯತ್ಯಾಸವಿದ್ದರು ಗ್ರೀಕ್ ಭಾಷೆಯಲ್ಲಿ ಮಾತನಾಡುವುದನ್ನು ಕೇಳಲು ಬಹಳ ಉತ್ಸಾಹವಾಗಿತ್ತು.

ಅಧ್ಯಾಯ - 3

# ನಮ್ಮ ಹೊಸ ಒಡಂಬಡಿ ಎಷ್ಟರ ಮಟ್ಟಿಗೆ ಸರಿಯಾಗಿದೆ?

ಯಾವುದೇ ಪ್ರಾಚೀನ ಮೂಲಗ್ರಂಥ ಸರಿಯಾಗಿದೆಯೇ ಎಂದು ತೀರ್ಮಾನಿಸುವಾಗ ಎರಡು ಪ್ರಶ್ನೆಗಳು ಬಹು ಮುಖ್ಯವಾಗುತ್ತವೆ. ಮೊದಲನೆಯ ಪ್ರಶ್ನೆಯೇನೆಂದರೆ, ಆ ಘಟನೆಗಳು ನಡೆಯುವುದಕ್ಕೂ ಅವುಗಳನ್ನು ಬರೆಯುವುದಕ್ಕೂ ನಡುವೆ ಎಷ್ಟು ಸಮಯದ ಅಂತರವಿದೆ ? ಸಮಯದ ಅಂತರ ಹೆಚ್ಚಿದರೆ, 100 ವರ್ಷಗಳಿಗಿಂತ ಹೆಚ್ಚಿದರೆ, ಆ ಮೂಲ ಪ್ರತಿಯನ್ನು ಯಾರಾದರೂ ಕೆಡಿಸಿರಲು ಸಾಧ್ಯತೆಗಳಿವೆ. ಉದಾಹರಣೆಗೆ ಭೌದಧರ್ಮದ ಬಗ್ಗೆ ಬುದ್ಧ ಬಾಳಿದ 500 ವರ್ಷಗಳಾದ ಮೇಲೆ ಬರೆಯಲಾಯಿತು. ಹಿಂದು ವೇದಗಳನ್ನು 700 ವರ್ಷಗಳಾದ ಬಳಿಕ ಬರೆಯಲಾಯಿತು. ಹೆಚ್ಚಿನ ಜನರು ಈ ಪ್ರಶ್ನೆಯನ್ನು ಕೇಳಬಹುದು "ಹೇಗೆ ಒಬ್ಬ ಪ್ರಾಚೀನ ಬರಹಗಾರ ಹಲವಾರು ಶತಮಾನಗಳ ಹಿಂದೆ ನಡೆದ ಘಟನೆಗಳನ್ನು ಸರಿಯಾಗಿ ವರದಿ ಮಾಡಬಹುದು?"

ಆದರೆ, ಹೊಸ ಒಡಂಬಡಿಕೆಯನ್ನು ಕಣ್ಣಾರೆ ಕಂಡ ಸಾಕ್ಷಿಗಳು ಬರೆದಿದ್ದಾರೆಂದು ಹೇಳುತ್ತಾರೆ. ಈ ಗ್ರಂಥದ ಘಟನೆಗಳು ಮೊದಲನೆಯ ಶತಮಾನದಲ್ಲಿ ನಡೆದಿದೆ.

ಎರಡನೆಯದಾಗಿ, ನಿಜವಾದ ಬರವಣಿಗೆಗೂ, ಮೊದಲ ಹಸ್ತಪ್ರತಿಗೂ ನಡುವೆ ಇರುವ ಸಮಯದ ಅಂತರವೆಷ್ಟು? ನಿಜವಾದ ಬರವಣಿಗೆ ಶೀಘ್ರವಾಗಿ ಬರೆದಿದ್ದರೂ, ಅದರ ಮೊದಲ ಹಸ್ತ ಪ್ರತಿಗಳು 1000 ವರ್ಷಗಳ ನಂತರ ಬಂದರೆ, ಆ ಬರವಣಿಗೆಯಲ್ಲಿ ತಪ್ಪುಗಳಿರಲು ಸಾಧ್ಯ.

ಸುದೈವದಿಂದ, ಹೊಸ ಒಡಂಬಡಿಕೆ ಈ ಎಲ್ಲಾ ಪರೀಕ್ಷೆಗಳನ್ನು ದಾಟಿದೆ.

**ಘಟನೆಗಳು ನಡೆಯುವಾಗ ಅಥವಾ ತಕ್ಷಣ ಬರೆಯಲಾಗಿದೆ......**

ಹೊಸ ಒಡಂಬಡಿಕೆಯ ಬಹುತೇಕ ಘಟನೆಗಳು 27 AD ಮತ್ತು 62AD (ಕ್ರಿ.ಶ.) ರ ನಡುವೆ ನಡೆದಿದೆ. ಯೇಸುವಿನ ಸೇವೆ 27 ಕ್ರಿ.ಶ ದಲ್ಲಿ ಶುರುವಾಗಿದ್ದು, ಅಪೋಸ್ತಲರ ಕೃತ್ಯಗಳ ಪುಸ್ತಕವೂ 62 ಕ್ರಿ.ಶದಲ್ಲಿ ಪೌಲನು ಕಾರಗೃಹಕ್ಕೆ ಹೋಗುವುದರಲ್ಲಿ ಕೊನೆಗೊಳ್ಳುತ್ತದೆ. 62ರ ನಂತರ ಯಾವಾಗ ಈ ಪುಸ್ತಕಗಳನ್ನು ಬರೆಯಲು ಪ್ರಾರಂಭಿಸಿದರೊ? 100 ವರ್ಷಗಳೇ? ವಿದ್ವಾಂಸರು 200 ವರ್ಷಗಳೆಂದು ಹೇಳುತ್ತಾರೆ/ ಆಶ್ಚರ್ಯಕರವಾಗಿ ಹೊಸ ಒಡಂಬಡಿಕೆಯಲ್ಲಿ ಬರೆದ ಮೊದಲನೆಯ ಪುಸ್ತಕವೆಂದರೆ - ಪೌಲನು 45 ಕ್ರಿ.ಶದಲ್ಲಿ ಗಲಾತ್ಯರಿಗೆ ಬರೆದ ಪುಸ್ತಕ ಹಾಗೆಂದರೆ, ಕ್ರಿಸ್ತನು ಸತ್ತು ಜೀವಂತವಾಗಿ ಎದ್ದ 15 ವರ್ಷಗಳ ಒಳಗೆಯೇ ಸಭೆಯು ತನ್ನ ಮೊದಲ ಇತಿಹಾಸ ಮತ್ತು ಸಿದ್ಧಾಂತವನ್ನು ಬರೆಯಿತು.

ಪೌಲನು ಗಲಾತ್ಯರಿಗೆ ಪುಸ್ತಕವನ್ನು ಬರೆಯುತ್ತಿರುವಾಗಲೇ ಅಪೋಸ್ತಲರ ಕೃತ್ಯಗಳ ಪುಸ್ತಕದ ಘಟನೆಗಳು ನಡೆಯುತ್ತಿದ್ದವು. ಪೌಲನು ಯಾವುದೋ ಶತಮಾನದ ಬಾಯಿಮಾತಿನ ಸಂಪ್ರದಾಯಗಳ ಬಗ್ಗೆ ಬರೆಯುತ್ತಿರಲಿಲ್ಲ. ಅದರ ಬದಲಾಗಿ ಕಣ್ಣಾರೆಕಂಡ ಘಟನೆಗಳ ವರದಿಯನ್ನು ಬರೆಯುತ್ತಿದ್ದನು. ಹೊಸ ಒಡಂಬಡಿಕೆಯ ಬಹುತೇಕ ಭಾಗವು ಆ ಘಟನೆಗಳು ನಡೆಯುತ್ತಿರುವಾಗಲೇ ಬರೆಯಲ್ಪಟ್ಟವು.

ಬೇರೆ ಎಲ್ಲಾ ಪುಸ್ತಕಗಳು ಒಂದರ ಹಿಂದೆ ಒಂದು ಬಂದವು. ಆ ಘಟನೆಗಳು 62 ಕ್ರಿ.ಶರಲ್ಲಿ ಮುಗಿದರೂ, ಅವುಗಳನ್ನು ಬರೆಯುವುದು 69 ಕ್ರಿ.ಶ ರಲ್ಲಿ ಮುಗಿಯಿತೆಂದು ವಿದ್ವಾಂಸರು ನಂಬುತ್ತಾರೆ. ಹಾಗೆಂದರೆ ಹೊಸ ಒಡಂಬಡಿಕೆಯ ಘಟನೆಗಳಿಗೂ, ಧರ್ಮ ಶಾಸ್ತ್ರದ ವಚನಗಳನ್ನು ಬರೆದು ಮುಗಿಸಲು ಹಿಡಿದ ಸಮಯಕ್ಕೂ ಕೇವಲ 7 ವರ್ಷಗಳ ಅಂತರವಿದೆ. ಐತಿಹಾಸಿಕವಾಗಿ ಈ ಅಂತರ ಬಹು ಸಣ್ಣದು. ಈ ಸಣ್ಣ ಅಂತರವನ್ನು ಐತಿಹಾಸಿಕರು ಲೆಕ್ಕಕೇ ತೆಗೆದುಕೊಳ್ಳುವುದಿಲ್ಲ. ಬರಹಗಾರರು ತಾವು ನೋಡಿದ ಮತ್ತು ಕೇಳಿದ ವಿಷಯಗಳನ್ನು ಸರಿಯಾಗಿ ಪ್ರಸ್ತುತ ಪಡಿಸಲು ಸಾಧ್ಯವಾಗಿತು. ಕೆಲವರು ಹೇಳಿದ ಹಾಗೆ, ಈ ಬರಹಗಾರರು ತಮ್ಮ ಮುತ್ತಾತ ಹೇಳಿದ ಕಟ್ಟು ಕಥೆಗಳನ್ನು ಬರೆಯಲಿಲ್ಲ. ಇವರು ಕಣ್ಣಾರೆ ಕಂಡದನ್ನು ಬರೆದಿದ್ದಾರೆ.

1976ರಲ್ಲಿ ಡಾ।। ಜಾನ್. ಎ.ಟಿ. ರಾಬೀನ್‌ಸನ್ ಬರೆದ "ರೀಡೇಟಿಂಗ್ ದ ನ್ಯೂ ಟೆಸ್‌ಟಿಮೆಂಟ್" ನಲ್ಲಿ ಹೊಸ ಒಡಂಬಡಿಕೆಯ ಎಲ್ಲಾ ಪುಸ್ತಕಗಳು 70 ಕ್ರಿ.ಶ ರೊಳಗೆ ಬರೆಯಲಾಗಿದೆ ಎಂದು ಹೇಳಿದ್ದಾರೆ. ಪ್ರಾಚೀನ ವಸ್ತು ಶಾಸ್ತ್ರ ಅಥವಾ ವೇದವಾಕ್ಯ ಶಾಸ್ತ್ರವನ್ನು ಬಲ್ಲವನಾಗಿದ್ದ ವಿಲ್ಲಿಯಮ್. ಎಫ್. ಆಲ್‌ಬ್ರೈಲ್ ಎಂಬುವವರು ಹೀಗೆ ಹೇಳಿದ್ದಾರೆ - "ಹೊಸ ಒಡಂಬಡಿಕೆಯ ಯಾವುದೇ ಪುಸ್ತಕವನ್ನು 80 ಕ್ರಿ.ಶ ರ ಮೇಲೆ ಬರೆಯಲಾಗಿದೆ ಎಂದು ಹೇಳಲು ಯಾವ ಬಲವಾದ ಆಧಾರವೂ ಇಲ್ಲ". ಇನ್ನೊಂದು ವಾರ ಪತ್ರಿಕೆಯಲ್ಲಿ ಅವರು ಹೀಗೆ ಹೇಳಿದ್ದಾರೆ - "ನನ್ನ ಅನಿಸಿಕೆಯಲ್ಲಿ ಹೊಸ ಒಡಂಬಡಿಕೆಯ ಎಲ್ಲಾ ಪುಸ್ತಕಗಳು ಒಬ್ಬ ಧೀಕ್ಷಾಸ್ನಾನ ಹೊಂದಿದ ಯೆಹೊದ್ಯನೇ 50 ಕ್ರಿ.ಶ ರ ಮತ್ತು 75 ರ ನಡುವೆ ಬರೆದಿದ್ದಾನೆ."

ಸಮಯದ ವಿಚಾರದಲ್ಲಿ ಯಾವ ಸಂದೇಹವೂ ಇಲ್ಲ. ಘಟನೆಗಳಿಗೂ ಅವುಗಳನ್ನು ಬರೆಯುವುದಕ್ಕೂ ನಡುವೆ ಇರುವ ಅಂತರ ಬಹಳ ಕಡಿಮೆಯಾಗಿದೆ. ಹೊಸ ಒಡಂಬಡಿಕೆಯ ಮೊಲನೆಯ ಪುಸ್ತಕವೂ ಯೇಸು ಸತ್ತ 15 ವರ್ಷಗಳ ಒಳಗೆಯೇ ಬರೆಯಲ್ಪಟ್ಟು, ಅಪೋಸ್ತಲರ ಕೃತ್ಯಗಳು ನಡೆಯುತ್ತಿರುವಾಗಲೇ ಬರೆಯಲಾಯಿತು. ಈ ಪುಸ್ತಕವನ್ನು ಅಪೋಸ್ತಲರ ಕೊನೆಯ ಘಟನೆಗಳು ನಡೆದ 7 ವರ್ಷಗಳ ಒಳಗೆ ಬರೆದು ಮುಗಿಸಿದರು. ಹಾಗಾದರೆ, ಹೊಸ ಒಡಂಬಡಿಕೆಯನ್ನು ರೋಮಪುರದವರು 70 ಕ್ರಿ.ಶ ರಲ್ಲಿ ಯೆರೂಸಲೇಮನ್ನು ಆಕ್ರಮಣ ಮಾಡುವ ಮುಂಚೆಯೇ ಬರೆದು ಮುಗಿಸಲಾಗಿತ್ತು.

ಈ ಸತ್ಯಾಂಶಗಳ ಮುಖ್ಯತೆ ಏನು? ಮೊದಲನೆಯದಾಗಿ ಸತ್ಯವೇದವು ಯೇಸು ಸತ್ತು ಹಲವಾರು ಶತಮಾನಗಳಾದ ಮೇಲೆ ಬರೆದ ಕಥೆಗಳೆಂಬ ವಾದವೂ ನಿರ್ಜೀವವಾಗಿದೆ. ಹೊಸ ಒಡಂಬಡಿಕೆಯು ಮೊದಲನೆಯ ಶತಮಾನದ ಕಾಗದಪತ್ರ.

ಎರಡನೆಯದಾಗಿ, ಈ ಮೂಲಪ್ರತಿ ಸರಿಯಾಗಿದೆ ಎಂಬುದಕ್ಕೆ ಆಧಾರಗಳಿವೆ. ಘಟನೆಗಳು ನಡೆಯುವುದಕ್ಕೂ, ಅವುಗಳನ್ನು ಬರೆಯುವುದಕ್ಕೂ ನಡುವೆ ಇದ್ದ ಅಂತರವು ಸಣ್ಣದಾಗಿದ್ದು ಕಲ್ಪನೆ ಅಥವಾ ದಂತ ಕಥೆಗಳು ಅವುಗಳಲ್ಲಿ ಸೇರಿಕೊಳ್ಳಲು ಆಸ್ಪದವೇ ಇಲ್ಲ ಎಂದು ವಿದ್ವಾಂಸರು ಹೇಳಿದ್ದಾರೆ. ಅಪೋಸ್ತಲರು ಸುಳ್ಳುಗಳನ್ನು ಹೇಳಿ ತಪ್ಪಿಸಿಕೊಳ್ಳುವ ಸಂಭವವೇ ಇರಲಿಲ್ಲ. ಪಾತ್ರಧಾರಿಗಳೂ ಸಾಕ್ಷಿಗಳೂ ಇನ್ನೂ ಜೀವಂತರಾಗಿದ್ದರು. ಕಠಿಣವಾದ ನಂಬಿಕೆಯಿಲ್ಲದವರೂ ಬದುಕಿದ್ದರು. ಈ ಹೊಸ ಒಡಂಬಡಿಕೆಯನ್ನು ಈ ಎಲ್ಲಾ ಜನರು ಬದುಕಿದ್ದಾಗಲೇ ಪ್ರಚಾರ ಪಡಿಸಿದ್ದರು. ಹಲವಾರು ಸಭೆಗಳು ಸಹ ಈ ಪುಸ್ತಕಗಳನ್ನು ಸರಿಯೆಂದು ಒಪ್ಪಿಕೊಂಡರು. ನೂರಾರು ಕಣ್ಣಾರೆ ಕಂಡ ಸಾಕ್ಷಿಗಳು ಬದುಕಿದ್ದಾಗಲೇ ಯಾವ ಕಟ್ಟು ಕಥೆಗಳೂ ವೇದವಾಕ್ಯದಲ್ಲಿ ಸೇರಿಕೊಳ್ಳುವ ಸಂಭವವಿರಲ್ಲಿಲ್ಲ.

ಈಗಲೂ ಹಾಗೆಯೇ ಇದೆ. ನಾನು ನಿಮಗೆ ನೆಲ್‌ಸನ್ ಮಂಡೇಲಾರವರು 1990 ರಲ್ಲಿ ಬಿಡುಗಡೆ ಹೊಂದಿದರು ಎಂದು ಹೇಳಿದರೆ ನೀವು ನಂಬುತ್ತೀರಿ. ನಾನು ನಿಮಗೆ ಅವರು ಸತ್ತ ಮೇಲೆ ಬದುಕಿ ಬಂದರು ಎಂದು ಹೇಳಿದರೆ ನೀವು ನಗಬಹುದು ನಾವೆಲ್ಲರೂ ಈ ಘಟನೆ ನಡೆಯುವಾಗಲೇ ಇದ್ದೆವು. ನಾನು ಈ ವಿಷಯದ ಬಗ್ಗೆ 2002ರಲ್ಲಿ ಬರೆಯುವಾಗ ಕೇವಲ 12 ವರ್ಷಗಳು ಕಳೆದಿವೆ. ನೆನಪುಗಳು ಹಸಿರಾಗಿವೆ. ನಾನು ಈ ಘಟನೆಗೆ ಹತ್ತಿರವಾಗಿದ್ದು ಯಾವ ಸುಳ್ಳು ಬೆಳವಣಿಗೆಗಳನ್ನೂ ಸೇರಿಸಲಾಗುವುದಿಲ್ಲ ನೂರಾರು ಸಾಕ್ಷಿಗಳಿದ್ದಾರೆ. ಅಪೋಸ್ತಲರ ಜೊತೆಯೂ ಹಾಗೆಯೇ ವಚನಗಳು ಮೊದಲನೆಯ ಶತಮಾನದಿಂದ ಬಂದಿದ್ದರಿಂದ ಅವು ಸತ್ಯವೆಂದು ನಂಬಬಹುದು.

## ಮೂಲ ಉತ್ಪತ್ತಿಯ ಬಗ್ಗೆ ಏನು ?

ನಾವು ಕೇಳಬಹುದು-''ಮೂಲ ಉತ್ಪತ್ತಿ ಅಥವಾ ಅವರೇ ಬರೆದ ಪುಸ್ತಕ ಏಕೆ ಇಲ್ಲ''? ಮೊದಲೇ ಹೇಳಿದ ಹಾಗೆ ಮೂಲ ಉತ್ಪತ್ತಿಯ ಪಾಪಿರಿ ಪ್ರತಿಗಳು ಕಾಲ ಹೋದಂತೆ ಹಾಳಾಗಿ ಹೋಗಲು ಸಾಧ್ಯತೆಯಿತ್ತು. ಈ ಕಾಲದಲ್ಲಿ ನಮ್ಮ ಕಾಗದದ ವೇದವಾಕ್ಯಗಳು ಉಪಯೋಗಿಸುತ್ತಾ ಹೋದಂತೆ ಹಾಳಾಗಿ ಹೋಗುವ ಹಾಗೆ ಆಗಲೂ ಇತ್ತು. ಆದರೂ ಮೂಲ ಪ್ರತಿಗಳು ಬಹಳ ದಿನಗಳ ತನಕ ಉಳಿದವು. ಸಭೆಗಳು ಅವರ ಹಸ್ತಾಕ್ಷರಗಳನ್ನು ಭದ್ರವಾಗಿ ಇಟ್ಟುಕೊಂಡು ಬಹಳ ವರ್ಷಗಳ ತನಕ ನಕಲು ಪ್ರತಿಗಳನ್ನು ಮಾಡಿ ಹಂಚುತಿದ್ದರು. ಕೆಲವು ಪಂಡಿತರು ಅನಿಸುತ್ತೆ, ಆ ಹಸ್ತಾಕ್ಷರಗಳನ್ನು

100 ವರ್ಷಗಳ ತನಕ ಮೊದಲನೆ ಶತಮಾನದ ಸಭೆಗಳ ಗ್ರಂಥಾಲಯಗಳಲ್ಲಿತು. ಇನ್ನು ಮೂಲ ಪ್ರತಿಗಳಿದ್ದಾಗಲೆ ತೆರ್ತುಲಿಯನ್ 196 (ಕ್ರಿ.ಸ್ತ ಶಕ) ರಲ್ಲಿ ಬರೆದ ವಿಷಯ ನನಗೆ ಬಹಳ ಪ್ರಿಯವಾಗಿದೆ.

ನಿಮಗೆ ನಿಜವಾಗಿದು ರಕ್ಷಣೆ ಮಾರ್ಗದ ವ್ಯವಹಾರದಲ್ಲಿ ಖಚಿತ ಪಡಿಸಿಕೊಳ್ಳಬೇಕು ಎಂಬ ಆಸಕ್ತಿ ಇದ್ದರೆ ಅಪೋಸ್ತಲರು ಇದ್ದ ಸಭೆಗಳನ್ನು ಭೇಟಿಕೊಡಿ, ಅದರಲ್ಲಿರುವ ಅಪೋಸ್ತಲರು ಸ್ವತಃ ಕುಳಿತಿರುವ ಕುರ್ಚಿಗಳನ್ನು ನೋಡಿ ಅದರ ಮೇಲೆ ಕುಳಿತೆ ಅಪೋಸ್ತರು ಬರೆದ ಪತ್ರಗಳನ್ನು ಓದಿ ಅದರಲ್ಲಿನ ಮಾತುಗಳನ್ನು ಸ್ಪಷ್ಟಪಡಿಸುತ್ತಿದ್ದರು. ಅಕಾಯ ಎಂಬ ನಾನಾರು ನಿಮ್ಮ ಬಳಿ ಇದೆಯೇ? ನಿಮ್ಮಲ್ಲಿ ಹೊರಂಡಿಯ ಇದೆಯೇ? ನೀವು ಮೆಸೆದೊನಿಯದಿಂದ ದೂರವಿರದಿದ್ದರೆ, ಫಿಲಿಪ್ಪಿಯ ಮತ್ತು ಥೆಸೆಲೋನಿಕ ನಿಮ್ಮಲಿದೆ? ಪಾಳಿಯಗೆ ತೆರಳಿದರೆ, ಎಫಸಿಯವಿದೆ. ನೀವು ಇಟಲಿಯ ಬಳಿ ಇದ್ದರೆ ನಿಮ್ಮಲ್ಲಿ ರೊಮಾಪುರವುಂಟು.

ಮೂಲ ಪ್ರತಿಗಳನ್ನು ಬಹಳ ನಕಲು ಮಾಡಿ ಹಂಚಲು ಸಭೆಗೆ ಬಹಳ ಸಮಯವಿದ್ದಂತೆ ತೋರುತ್ತಿದೆ. ಸಾವಿರಾರು ನಕಲು ಈಗಲು ಇದೆ.

ಹೊಸ ಒಡಂಬಡಿಕೆಯ ಮೂಲ ಪ್ರತಿ ನಮ್ಮಲಿಲ್ಲದಿದ್ದರು (ಪ್ಲಾಟೋ ಅಥವಾ ಹೊಮರ್ ಅಥವಾ ಹಳೆಯ ಯಾವುದೆ ಕೃತಿ) ನಾವು ಖಚಿತವಾಗಿ ಹೇಳಬಹುದು ಇದು ಸರಿಯಾಗಿದು ನಕಲು ಮಾಡಲಾಗಿದೆ. ಪತ್ರಗಳನ್ನು ಬರೆದು, ಪಡೆದು, ನಕಲು ಮಾಡಿ, ಪ್ರಸಾರ ಮಾಡಿ (ಕಲೊಸ್ಸನು 4:16) ಬಹಿರಂಗವಾಗಿ ಓದಿ (1 ಥೆಸೆಲೋನಿಕ 5:27) ಮತ್ತು ದಫ್ತರ ಖಾನೆಯಲ್ಲಿ ಅಂದಿನ ಸಭೆಯವರಿಟ್ಟರು. ನಮ್ಮಲ್ಲಿರುವ ಹಳೆಯ ಪ್ರತಿಗಳು ಕ್ರಿಸ್ತಶಕ 110ರ ದಿನಾಂಖದ (ಪಾಪಿರಸ್ ನಂ. 52, ಈಗ ಅದು ಮಾನ್ಚೆಸ್ಟರ್, ಇಂಗ್ಲೆಂಡ್‌ನಲ್ಲಿದೆ) ಕೆಲವು ಪಂಡತರು ಅದು ಇನ್ನು ಹಳೆಯದೆನ್ನುತ್ತಾರೆ, ಆದರೆ 110 ಕ್ರಿ.ಸ. ನಿಜಾಮಿತ ಊಹೆ. ಯೋಹಾನ ಬರೆದ ಸುವಾರ್ತೆ ಪಾಪಿರಸ್ ಪ್ರತಿಯಲ್ಲಿ ನಾವು ಓದಬಹುದಾದಂತ ವಿಷಯ ನಿಜಕ್ಕೂ ಆಶ್ಚರ್ಯಜನಿಕ. ಅದು ಮೊದಲನೆ ಜನಾಂಗದ ಪ್ರತಿಯಾಗಿರಬಹುದು. ಪಾಪಿರಸ್ ನಂ. 52 ಈಗಿನ ಸತ್ಯವೇದಕ್ಕೂ ಹೋಲಿಸಿ ನೋಡಿದರೆ ಹೇಗಿರುತ್ತದೆ? ಎರಡು ಸರಿಸಮಾನವಾಗಿರುತ್ತದೆ. ಪಾಪ್ತಿ ಪ್ರತಿಗಳು ಕಂಡು ಹಿಡಿದಿದ್ದು, ಹೊಸ ಒಡಂಬಡಿಕೆ ಖಚಿತವಾಗಿದೆ ಎಂದು ಪ್ರಮಾಣಿಸುತ್ತದೆ.

ನಮ್ಮಲ್ಲಿ ಮೂಲ ಪ್ರತಿಗಳಿಲ್ಲವೆಂದು ನನ್ನ ನಂಬಿಕೆಗೆ ಧಕ್ಕೆ ತರುತ್ತದೆಯೆ? ಕಂಡಿತ ಇಲ್ಲ. ಮೂಲ ಪ್ರತಿಗಳು ಮತ್ತು ನಮ್ಮ ಬಳಿ ಇರುವ ನಕಲು ಪ್ರತಿಗಳು ಬರೆದಿರುವಂತ ಸಮಯದ ಅಂತರ ಬಹಳ ಕಮ್ಮಿ. ಅದೆ ಅಲ್ಲದೆ, ನಮ್ಮ ನಕಲು ಪ್ರತಿಗಳು ಬಹಳಷ್ಟು ಇದ್ದು ಚೆನ್ನಾಗಿಯು ಇರುವಂತ ಕಾರಣ ಮೂಲ ಪ್ರತಿ ಸಿಕ್ಕರು ನಾವು ಗುರುತಿಸಲು ಆಗದೆ ಇರಬಹುದು.

## ಕಾಪಾಡುವತ್ತ ವಸ್ತುಶಾಸ್ತ್ರ

ಕೆಳೆದ ಕೆಲವು ಶತಮಾನಗಳಲ್ಲಿ ಹೊಸ ಒಡಂಬಡಿಕೆಯ ಹಳೆ ಪ್ರತಿಗಳನ್ನು ಕಂಡು ಹಿಡಿದಿರುವುದು ನಿಜವಾಗಿಯು ಮನಸೂರೆಗೊಳ್ಳುವಂತದ್ದು. ಪ್ರಾರಂಭದಲ್ಲಿ ಕೆಲವು ನೂರು ವರ್ಷಗಳ ಹಿಂದೆ ಪಂಡಿತರು ಪ್ರಪಂಚವನ್ನು ಸುತ್ತಿ ಮಠಗಳಿಗೆ, ಗ್ರಂಥಾಲಯಗಳಿಗೆ ಮತ್ತು ಸಭೆಗಳಿಗೆ ಬೇಟಿ ಮಾಡಲು ಪ್ರಾರಂಭಿಸಿದರು. ನಮಗೆ ಸಿಕ್ಕಿರುವ ಹೊಸ ಒಡಂಬಡಿಕೆಯನ್ನು ಹುಡುಕುವುದರಲ್ಲಿ ಜೋಡಿಸುವದರಲ್ಲಿ, ಭಾವಚಿತ್ರ ತೆಗೆಯುವುದರಲ್ಲಿ ಮತ್ತು ಜೋಪಾನ ಮಾಡುವುದರಲ್ಲಿ ಬಹಳ ಶ್ರಮಿಸಿದರು. ವಚನಗಳು ಬರೀ ಗೊಂದಲಗಳುಳ ಪುರಾಣ ಕಥೆಯಲ್ಲ, ನಿಜವಾಗಿ ನಡೆದಂತ ಸಂಗತಿಗಳು ಇದರಲ್ಲಿ ಸಂಶಯವೇ ಇಲ್ಲವೆಂದು ನಮಗೆ ಸಿಕ್ಕಿರುವ ಪ್ರತಿಗಳು ವಿಶ್ವಾಸಗಳಿಗೆ ಮನದಟ್ಟು ಮಾಡುತ್ತಿದೆ. ನಂಬಿದರೆ ನಂಬಿ ಬಿಟ್ಟರೆ ಬಿಡಿತ, ಈಗ ನಮ್ಮ ಬಳಿ 40,000 ಹೊಸ ಒಡಂಬಡಿಕೆಯ ಪ್ರತಿಗಳು ಗ್ರಂಥಾಲಯದಲ್ಲಿ ಸಂಗ್ರಹಾಲಯದಲ್ಲಿ, ಸಭೆಗಳಲ್ಲಿ, ಮತ್ತು ಮಠಗಳಲ್ಲಿದೆ. ಹೊಸ ಒಡಂಬಡಿಕೆ ಸಾಕ್ಷ್ಯಗಳು ನಿಜಕ್ಕೂ ವಿಸ್ಮಯ ಪಡಿಸುವಂಥದ್ದು.

ಈ ದಿನ ನಮ್ಮ ಬಳಿ 900 ಕ್ರಿ.ಶ. ಗಳ ಸಾವಿರಾರು ಹಸ್ತ ಪ್ರತಿಗಳಿವೆ.300 ಕ್ರಿ.ಶ. ಚರ್ಮದ ಮೇಲೆ ಬರೆದ ಹಸ್ತ ಪ್ರತಿಗಳು ನೂರಾರಿವೆ. ಪಾಪಿರಸ್ ಪುಸ್ತಕಗಳು ಮತ್ತು ಚೂರುಗಳ ಮೇಲೆ ಬರೆದಿರುವುದು ಬೆಟ್ಟದಷ್ಟಿದೆ. ಇವು 300 ಕ್ರಿ.ಸ. ದಲ್ಲಿ ಬರೆದಿರುವ ಮತ್ತು ಮೂಲ ಪ್ರತಿಗಳ ಅಂತರವನ್ನು ತುಂಬಿದೆ.

ಈ ದಿನ ಉಳಿದಿರುವ ಪಾಂತ್ರಿ ಐಗುಪ್ತ ದೇಶದಲ್ಲಿ ಸಿಕ್ಕಿರುವಂತಹುದು ಒಣ ಮರುಭೂಮಿಯಂತಹ ವಾತಾವರಣದಲ್ಲೆ ಪೇಪರ್‌ನಂತ ವಸ್ತುಗಳನ್ನು ಉಳಿಸಲಾಗುತ್ತದೆ ಫ್ಲೆಂಡರ್ಸ್ ಪೆಬ್ರಿ, ಮಧ್ಯ ಐಗುಪ್ತ ದೇಶದಲ್ಲಿ ಭೂಶೋಧನೆ ಮಾಡುತ್ತಿರುವಾಗ ಮೊದಲ ಬಾರಿಗೆ ಹಳೆಯ ಪಾಪಿರಸ್ ಹಾಳೆಗಳನ್ನು ಮಣ್ಣಿನಲ್ಲಿ ಹೂತಿದ್ದು ನೋಡಿದರು. ಆಕ್ಸಿರೈಕಸ್ ಸುತ್ತಲು ಪದ್ಧತಿ ಪ್ರಕಾರ 1895ರಲ್ಲಿ ಹುಡುಕಲಾರಂಭಿಸಿದರು. ಅಲ್ಲಿ ಅವರಿಗೆ ಸಾವಿರಾರು ಹಸ್ತಪ್ರತಿಗಳು ದೊರೆತವು. ಅವರು ಅದನ್ನು ಮಣಿನ ಅಡಿಯಲ್ಲಿ ಹೂತಿದ್ದ ಕಸದಲ್ಲಿ ಹೆಣಗಳನ್ನು ಹೂತಿಟ್ಟ ಮಮ್ಮಿಗ್ರಳಲ್ಲಿ, ಸುಗಂಧ ದ್ರವ್ಯ ಪೂಸಿದ ಮೊಸಳೆ ದೇಹಗಳಲ್ಲಿಂದ ಹೊರ ತೆಗೆದರು. ಪತ್ರಗಳು, ಬೆಲೆ ಪಟ್ಟಿಗಳು, ರಸೀದಿಗಳು, ದಿನಚರಿ ಪುಸ್ತಕಗಳು, ಪ್ರಮಾಣ ಪತ್ರಗಳು, ಪಂಚಾಂಗಗಳು ಇತ್ಯಾದಿ ಅವರಿಗೆ ಸಿಕ್ಕಿತು. ಕೆಲವು 2000 ಕ್ರಿ.ಪು. ದಿನಾಂಖಕ್ಕೆ ಸೇರಿದವು ಬಹಳಷ್ಟು ಯೇಸುವಿನ ಹಿಂದಿನ ಮತ್ತು ಮುಂದಿನ ಶತಮಾನಕ್ಕೆ ಸೇರಿದವು. ಅದರಲ್ಲಿ ಕ್ರೈಸ್ತವ ಕೃತ್ಯಗಳೂ ಇದ್ದವೂ.... ಅಮೂಲ್ಯವಾದ ಶಿಷ್ಯರು ಬಿಟ್ಟು ಹೋದ ವಚನಗಳು. ಈ ಪಾಪ್ರಿಗಳು ವಚನಗಳನ್ನು ಎಷ್ಟು ಖಚಿತವಾಗಿ ಅನುಕರಣ ಮಾಡಿರುವುದೆಂದ ತೋರಿಸುತ್ತದೆ. ಈ ದಿನ ನಾವು ಓದುವ ಹೊಸ ಒಡಂಬಡಿಕೆ ಮೊದಲನೆ ಶತಮಾನದಲ್ಲಿ ಬರೆದಿರುವ ಮೂಲ ಪ್ರತಿಗಳಿಗೆ ಸರಿ ಸಮವಾಗಿಯೆ ಇವೆ.

ನಮಗೆ ಸಿಕ್ಕಿದ ಕೈ ಬರಹದ ಹಳೆಯ ಜಂಬುಕಾಗದದ ಮೂಲಗ್ರಂಥದ ಪ್ರತಿಗಳು, ಮುಂದಿನ ಪೀಳಿಗೆಯ ಚರ್ಮಕಾಗದದ ಪ್ರತಿಗಳನ್ನು ದೃಢಪಡಿಸಿದ್ದೂ ಅಲ್ಲದೆ ಆ ಕಾಲದಲ್ಲಿ ಚಲಾವಣೆಯಲ್ಲಿದ್ದ ಗ್ರೀಕ್ ಭಾಷೆಯ ಬಗ್ಗೆ ಹೊಸ ಬೆಳಕನ್ನು ಚೆಲ್ಲಿದವು, ಗ್ರೀಕ್ ಹೊಸ ಒಡಂಬಡಿಕೆಯಲ್ಲಿ ಬರುವ ಸುಮಾರು 500 ಪದಗಳು ಗ್ರೀಕ್ ಸಾಹಿತ್ಯ ಗ್ರಂಥಗಳಲ್ಲಿ ಕಾಣ ಸಿಗುವುದೇಯಿಲ್ಲ. ಸತ್ಯವೇದವು ತನ್ನದೇ ಆದ ವಿಶಿಷ್ಠ ಶಬ್ಧಕೋಶವನ್ನೊಳಗೊಂಡಿದೆ. ಆ ಶಬ್ಧಕೋಶವು ಎರಡು, ಮೂರು ಶತಮಾನಗಳ ನಂತರ ಯಾರು ಕಲ್ಪಿಸಲು ಸಾಧ್ಯವಿಲ್ಲ ಆದರೂ ಈ ಜಂಬು  ಕಾಗದದ ಪ್ರತಿಗಳನ್ನು ಹಳೆಯ ಮರಳಡಿಯಿಂದ ಆಗೆದು ತೆಗೆದಾಗ ಸತ್ಯವೇದದ ಶಬ್ಧಕೋಶಕ್ಕೂ ಮತ್ತು ಅದು ಬರೆದ ಶೈಲಿಗೂ ಸಂಪೂರ್ಣ ಹೊಂದಾಣಿಕೆಯಾದವು, ಅದು ನಾವು ಎಣಿಸಿದಂತಾಯಿತು.

ಸತ್ಯವೇದ ವಿಮರ್ಶಕರ ಒಂದು ಸಾಮಾನ್ಯ ಭಾವನೆಯೇನೆಂದರೆ ಹೊಸ ಒಡಂಬಡಿಕೆಯು, ಘಟನೆಗಳು ನಡೆದ 100 ಅಥವಾ 200 ವರ್ಷಗಳ ನಂತರ ಬರೆಯಲ್ಪಟ್ಟಿದೆ ಎಂದು. ಆದರೆ ಅದು ಶುದ್ಧ ಅವಿವೇಕ, ಹೊಸ ಒಡಂಬಡಿಕೆಯ ಪುಸ್ತಕಗಳು ಮೊದಲು ಶತಮಾನದ ಮಧ್ಯದಲ್ಲಿ ಬರೆಯಲ್ಪಟ್ಟಿದೆಯೆಂಬ ಸತ್ಯವನ್ನು ಯಾರು ತರ್ಕಿಸುವುದಿಲ್ಲ.

ಈಗ ನಮಗೆ ಸಿಕ್ಕಿದ ಪ್ರತಿಗಳು ಎಷ್ಟು ಪ್ರಾಚೀನವಾದವು ಎಂದರೆ ಮೊದಲು ಸ್ವಹಸ್ತಪ್ರತಿಗೂ ಮತ್ತು ದರ ಮೊದಲ ನಕಲು ಪ್ರತಿಗೂ ನಡುವೆ ಇರುವ ಸಮಯ ಗಣನೆಗೆ ಬಾರದಷ್ಟು ಕಡಿಮೆಯಾಗಿದೆ.

ಹೊಸ ಒಡಂಬಡಿಕೆಯ ಮೂಲಗ್ರಂಥ ಪ್ರತಿಗಳು, ಒಂದೂ ತಪ್ಪಿಲ್ಲದೆ ಸರಿಯಾಗಿ ಬರೆದಿವೆಯೆಂದು ನಿಸ್ಸಂದೇಹವಾಗಿ ಸಾಬೀತಾಗಿದೆ. ಏಕೆಂದರೆ ನಾವು ಓದುವ ಸತ್ಯವೇದದ ವಾಕ್ಯಗಳು, ಮೊದಲ ಗ್ರಂಥಕರ್ತನ ಸ್ವಂತ ವಾಕ್ಯಗಳೇ ಎಂಬುದರಲ್ಲಿ ಏನು ಸಂದೇಹವಿಲ್ಲ, ಅದೇನಿದ್ದರೂ, ಅದನ್ನು ನಂಬುವುದು ನಮ್ಮ ಇಚ್ಛೆಗೆ ಬಿಟ್ಟಿದೆ, ಆದರೆ ಈಗ ನಮ್ಮಲ್ಲಿರುವ ಸತ್ಯವೇದವು ಮೂಲಗ್ರಂಥದಿಂದ ಒಂದೂ ತಪ್ಪಿಲ್ಲದೆ ಸರಿಯಾಗಿ ಸತ್ಯವಾಗಿ ತೆಗೆಯಲ್ಪಟ್ಟ ಪ್ರತಿಯೊಂದು ಸಾಮಾನ್ಯ ಅಭಿಪ್ರಾಯವಾಗಿದೆ.

## ಮಿತಿಮೀರಿದ ಸಾಕ್ಷ್ಯಾಧಾರಗಳು

ಪ್ರಾಚೀನ ಗ್ರಂಥಗಳ ವಿಷಯದಲ್ಲಿ ಉಪಯೋಗಿಸುವ ದ್ವಿಪ್ರಮಾಣ ದರ್ಜೆಯನ್ನು ಕ್ರೈಸ್ತರು ಅರಿತುಕೊಳ್ಳಬೇಕು. ಹೊಸ ಒಡಂಬಡಿಕೆಯು ಸೂಕ್ಷ್ಮದರ್ಶಕದ ಕೆಳಗೆ ಹಾರಿ ವೀಕ್ಷಿಸಿದರೂ, ಒಂದು ಕುಲಾಬಿಯಂತೆ ಸುಗಂಧ ಬೀರುತ್ತಾ ಹೊರಬಂದಿದೆ. ಆದರೆ ಬೇರೆ ಪ್ರಾಚೀನ ಗ್ರಂಥಗಳು ಇದಕ್ಕೆ ಹೋಲಿಸಿದರೆ, ದುರ್ಬಲ ಸಾಕ್ಷ್ಯಾಧಾರಗಳನ್ನು ಹೊಂದಿವೆಯೆಂದು ವಿದ್ವಾಸಂರು ತುಂಬು

ಹೃದಯದಿಂದ ಒಪ್ಪಿಕೊಳ್ಳುತ್ತಾರೆ.

ಉದಾಹರಣೆಗೆ ನಾವೀಗ ಸತ್ಯವೇದವನ್ನು ಚೆನ್ನಾಗಿ ತಿಳಿದಿರುವ ಇತರ ಪ್ರಾಚೀನ ಗ್ರಂಥಗಳಿಗೆ ಹೋಲಿಸೋಣ, ಸತ್ಯವೇದವು, ಪ್ಲೇಟೊ ಮತ್ತು ಅರಿಸ್ಟೋಟಲ್ ಬರೆದ ಗ್ರಂಥಗಳಗೆ ಹೇಗೆ ಹೋಲಿಕೆಯಾಗಿದೆ? ನಿಜವಾಗಿ ತುಂಬಾ ಚೆನ್ನಾಗಿ ಹೋಲಿಕೆಯಾಗಿದೆ, ಹೇಗೆಂದರೆ,

ಪ್ಲೇಟೊ ಎಂಬುವವರು ಕ್ರಿ.ಪೂ. 400ರಲ್ಲಿ ಗ್ರಂಥವನ್ನು ಬರೆದರು. ಆದರೆ ಈಗ ನಮ್ಮಲ್ಲಿರುವ ಅದರ ಮೊದಲ ಪ್ರತಿ ಕ್ರಿ.ಶ. 900 ರಲ್ಲಿ ತೆಗೆದಿರುವುದ. ಅಂದರೆ ಹಸ್ತಪ್ರತಿಗೂ, ನಕಲು ಪ್ರತಿಗೂ ನಡುವೆ 1300 ವರ್ಷಗಳ ಅಂತರವಿದೆ. ಅದು ಅಲ್ಲದೆ ಪ್ಲೇಟೊ ಬರೆದ ಮೂಲಗ್ರಂಥದ ಕೇವಲ 7 ಪ್ರತಿಗಳು ಮಾತ್ರ ಇನ್ನೂ ಉಳಿದಿವೆ.

ಅರಿಸ್ಟೋಟಲ್ ಬರೆದ ಗ್ರಂಥಗಳಿಗೂ ಇದೇ ಗತಿ, ಮೊದಲ ಹಸ್ತಪ್ರತಿಗೂ ಅದರ ನಕಲು ಪ್ರತಿಗೂ ನಡುವೆ 1500 ವರ್ಷಗಳ ಅಂತರ ಮತ್ತು ಮೂಲಗ್ರಂಥದ 5 ಪ್ರತಿಗಳು ಮಾತ್ರ ಉಳಿದಿವೆ. ಹೋಮರ್ ಎಂಬ ಸಾಹಿತಿ ಬರೆದ ಒಡೆಸ್ಸಿ ಎಂಬ ಗ್ರಂಥದ ಪ್ರತಿ ಮೂಲಗ್ರಂಥ ಬರೆದ 2200 ವರ್ಷಗಳ ನಂತರ ತೆಗೆದದು ಮಾತ್ರ ನಮ್ಮಲ್ಲಿದೆ. ಹೌದು ನಿಜವಾಗಿ 2200 ವರ್ಷಗಳ ಅಂತರ, ಆದರೆ ಈ ಗ್ರಂಥಗಳ ಸತ್ಯಾಸತ್ಯತೆಯನ್ನು ಯಾರೂ ಪ್ರಶ್ನಿಸುವುದಿಲ್ಲ ಅಥವಾ ಅಪನಂಬಿಕೆ ಪಡುವುದಿಲ್ಲ. ವಿಶ್ವದಾದ್ಯಂತ ಎಲ್ಲಾ ವಿದ್ವಾಂಸರು ಈ ಗ್ರಂಥಗಳು ಪ್ರಾಚೀನ ಗ್ರಂಥಗಳಿಂದ ತೆಗೆದ ಒಂದೂ ತಪ್ಪಿಲ್ಲದ, ಸರಿಯಾದ ಪ್ರತಿಗಳೆಂದು ಒಪ್ಪಿಕೊಂಡಿದ್ದಾರೆ. ಸತ್ಯವೇದವು ಎಷ್ಟೊಂದು ಸಾಕ್ಷ್ಯಾಧಾರಗಳನ್ನು ಹೊಂದಿದೆಯೆಂದರೆ, ಬೇರೆ ಗ್ರಂಥಗಳು ಮೂಲ ಗ್ರಂಥದಿಂದ ಮೊದಲ ಪ್ರತಿಗೆ ನಡುವೆ 1000 ವರ್ಷಗಳಿಗೂ ಹೆಚ್ಚಿನ ಅಂತರವನ್ನು ಹೊಂದಿರುವುದು ಸಂಕೋಚಗೊಳ್ಳುವಷ್ಟು ಹಿರಿದಾಗಿದೆ. ಆದರೆ ಸತ್ಯವೇದ ಹಾಗಲ್ಲ, ಘಟನೆಗಳು ನಡೆದ ತಕ್ಷಣವೇ ಬರೆಯಲ್ಪಟ್ಟಿದೆ ಮಾತ್ರವಲ್ಲ ಅದರ ಪ್ರತಿಗಳೂ ಬಹುಬೇಗ ಮೊದಲ ಶತಮಾನದ ಕ್ರೈಸ್ತಿರು ಸಭೆಗಳಲ್ಲಿ ಕಾಣಲ್ಪಟ್ಟವು.

ಈ ಕೆಳಗಿನ ಫಲಕವನ್ನು ನೋಡೋಣ :

| ಗ್ರಂಥ | ಬರೆದ್ದದು | ಮೊದಲ ಪ್ರತಿ | ಅಂತರ | ಉಳಿದ ಪ್ರತಿಗಳು |
|---|---|---|---|---|
| ತುಸಿಡೈಡ್ಸ್ ಎಂಬ ಇತಿಹಾಸ | ಕಿ.ಪೂ. 450 | ಕ್ರಿ.ಶ. 900 | 1350 ವರ್ಷಗಳು | 8 |
| ಅರಿಸ್ಟೋಟಲ್ ಬರೆದ ಪದ್ಯಗಳು | ಕ್ರಿಪೂ. 343 | ಕ್ರಿ.ಶ. 1100 | 1450 ವರ್ಷಗಳು | 5 |
| ಸೀಜರ್ ಬರೆದ | ಕ್ರಿ.ಪೂ. 50 | ಕ್ರಿ.ಶ. 1000 | 1050 ವರ್ಷಗಳು | 9 |

| | | | | |
|---|---|---|---|---|
| ಗೇಲ್ಲಿಕ್ ಯುದ್ಧ | | | | |
| ಪ್ಲೇಟೋ | ಕ್ರಿ.ಪೂ. 400 | ಕ್ರಿ.ಶ. 900 | 1300 ವರ್ಷಗಳು | 7 |
| ಹೋಮರ್ | ಕ್ರಿ.ಪೂ. 900 | ಕ್ರಿ.ಪೂ. 400 | 500 ವರ್ಷಗಳು | 643 |
| ಹೊಸ ಒಡಂಬಡಿಕೆ | ಕ್ರಿ.ಶ. 45-80 | ಕ್ರಿ.ಶ. 110 | 30 ವರ್ಷಗಳು | 24,600 |

ಮೂಲಗ್ರಂಥದ ಪ್ರತಿಗಳು ಎಷ್ಟೊಂದು ಅಧಿಕ ಸಂಖ್ಯೆಯಲ್ಲಿ ನಮ್ಮಲ್ಲಿವೆ ಎಂಬುದನ್ನು ಎಲ್ಲರೂ ಕಾಣುವಷ್ಟು ಸ್ಪಷ್ಟವಾಗಿದೆ. ಹೊಸ ಒಡಂಬಡಿಕೆ ಬೇರೆ ಗ್ರಂಥಗಳನ್ನು ಅತಿಶಯವಾಗಿ ಮೀರಿಸುತ್ತದೆ. ಅದಕ್ಕಿಂತ ಹೆಚ್ಚೇನೆಂದರೆ, ಪ್ರಾಚೀನ ಇತಿಹಾಸದಲ್ಲಿ ಅನುವಾದವು ಒಂದು ವಿರಳವಾದ ವಿಷಯವಾಗಿತ್ತು. ಆದರೆ ಹೊಸ ಒಡಂಬಡಿಕೆಯ ಸುಮಾರು 20,000 ಪ್ರತಿಗಳು ಲಾಟಿನ್, ಸಿರಿಯಾಕ್ ಮತ್ತು ಇತರ ಭಾಷೆಗಳಿಗೆ ಅನುವಾದಿಸಲ್ಪಟ್ಟವು ನಮ್ಮಲ್ಲಿವೆ. ಇವನ್ನೆಲ್ಲಾ ಸೇರಿಸಿದರೆ ನಮ್ಮಲ್ಲಿರುವ ಮೂಲಗ್ರಂಥದ ಮೂಲ ಪ್ರತಿಗಳ ಸಂಖ್ಯೆ 40,000ಕ್ಕೂ ಹೆಚ್ಚಾಗುತ್ತವೆ. ಇದಕ್ಕೆ ಹೋಲಿಸಿದರೆ ಬೇರೆ ಗ್ರಂಥಗಳ ಮೂಲ ಪ್ರತಿಗಳ ಸಂಖ್ಯೆ ಬೆರಳೆಣಿಕೆಯಷ್ಟಿವೆ ಅಷ್ಟೆ, ಸತ್ಯವೇದಕ್ಕೆ ಮೂಲಪ್ರತಿಗಳ ಸಂಖ್ಯೆಗಳ ಆಧಾರ ಎಲ್ಲರನ್ನೂ ವಿಸ್ಮಯಗೊಳಿಸುವಷ್ಟಿದೆ. ಸತ್ಯವೇನೆಂದರೆ 10 ಇತರ ಗ್ರಂಥಗಳನ್ನು ಒಟ್ಟಾಗಿ ಸೇರಿಸಿದರೂ, ಸತ್ಯವೇದಕ್ಕಿರುವ ಸಾಕ್ಷ್ಯಾಧಾರಗಳು ಅವೆಲ್ಲವನ್ನೂ ಮೀರಿಸುತ್ತವೆ.

ಹೇಗೆಂದರೆ, ಯಾರಾದರೂ ಮೂಲಪ್ರತಿಗಳ ವಿಷಯದಲ್ಲಿ ಸತ್ಯವೇಧವನ್ನು ತಿರಸ್ಕರಿಸಿದರೆಂದರೆ, ಅವರು ಬೇರೆಲ್ಲಾ ಗ್ರಂಥಗಳನ್ನು ಆ ವಿಷಯದಲ್ಲಿ ಕಡ್ಡಾಯವಾಗಿ ತಿರಸ್ಕರಿಸಬೇಕಾಗುತ್ತದೆ. ಆದರ ಸಾಕ್ಷ್ಯಾಧಾರ ಅಷ್ಟು ಬಲವಾದುದು. (ಬೌದ್ಧ ಧರ್ಮಕ್ಕೆ ಹೋಲಿಸೋಣ ಬುದ್ದನ ಮಾತುಗಳನ್ನು ಅವರು ಸತ್ತು 500 ವರ್ಷಗಳ ನಂತರ ಬರೆದರು. ಹಿಂದೂ ವೇದಗಳೂ ಅಷ್ಟೇ (ಕ್ರಿ.ಪೂ. 1500-1200) 700 ವರ್ಷಗಳ ನಂತರ ಬರೆಯಲ್ಪಟ್ಟವು. ಮೊದಲ ಮೂಲಪ್ರತಿ ಈಗ ಉಳಿದಿರುವುದು. ಕ್ರಿ.ಶ. 1300 ರಲ್ಲಿ ಬರೆಯಲ್ಪಟ್ಟಿದೆ. ಅಂದರೆ ಹಸ್ತಪ್ರತಿಗೂ ಮೊದಲ ಪ್ರತಿಗೂ ನಡುವೆ 2000 ವರ್ಷಕ್ಕೂ ಹೆಚ್ಚಿನ ಅಂತರವಿದೆ).

ಆದರೆ ಹೊಸ ಒಡಂಬಡಿಕೆ ಬರೇ ಪ್ರಾಚೀನ ಗ್ರೀಕ್ ಮೂಲಪ್ರತಿಯ ಆಧಾರದ ಮೇಲೆ ಮಾತ್ರ ನಿಂತಿಲ್ಲ. ಸತ್ಯವೇನೆಂದರೆ : ಪ್ರತಿಯೊಂದು ಸತ್ಯವೇಧದ ಪ್ರತಿಯನ್ನು ಮತ್ತು ಪ್ರಾಚೀನ ಮೂಲಪ್ರತಿಯನ್ನು ಸುಟ್ಟು ನಾಶಮಾಡಿದರೂ, ನಮ್ಮಲ್ಲಿ ಹೊಸ ಒಡಂಬಡಿಕೆಯು ಸಂಪೂರ್ಣವಾಗಿ ದೊರೆಯುತ್ತದೆ, ಹೇಗೆಂದರೆ ಆ ಕಾಲದಲ್ಲಿ ಬರೆದಿರುವ ಸತ್ಯವೇಧ ವಿವರಣೆಗಳಲ್ಲಿ, ಟೀಕೆಗಳಲ್ಲಿ ಪತ್ರಗಳಲ್ಲಿ, ಧರ್ಮೋಪನ್ಯಾಸಗಳಲ್ಲಿ 80,000ಕ್ಕೂ ಹೆಚ್ಚಿನ ಸಾರಿ ಎಲ್ಲಾ ವಚನಗಳೂ ಎತ್ತಿ ಬರೆಯಲ್ಪಟ್ಟವು 11 ವಚನಗಳು ಮಾತ್ರ ತಪ್ಪಿ ಹೋಗಿವೆ. ನನಗಂತೂ ಈ ವಿಚಾರ ತುಂಬಾ ಹುರಿದುಂಬಿಸುತ್ತದೆ. 40,000 ಮೂಲಪ್ರತಿಗಳು ಹೊಸ ಒಡಂಬಡಿಕೆಯ

ಮೂಲಗ್ರಂಥವನ್ನು ಖಚಿತಗೊಳಿಸುವುದು. ಒಂದು ಅದ್ಭುತ ವಿಷಯವೇನೆಂದರೆ ಹೊಸ ಒಡಂಬಡಿಕೆಯ ವಚನಗಳನ್ನು ಆ ಪ್ರಾಚೀನ ಕಾಲದ ಗ್ರಂಥಕರ್ತರು ತಮ್ಮ ಗ್ರಂಥಗಳಲ್ಲಿ ಹೆಚ್ಚು ಹೆಚ್ಚಾಗಿ ಎತ್ತಿ ಹೇಳಿ ಅದನ್ನು ಖಚಿತ ಪಡಿಸಿರುವುದು ನಮ್ಮನ್ನೆಲ್ಲಾ ಉತ್ಸಾಹಗೊಳಿಸುತ್ತದೆ. ತಮ್ಮ ಗ್ರಂಥಗಳಲ್ಲಿ ವಚನಗಳನ್ನು ಎತ್ತಿ ಹೇಳಿ ವಿವರಿಸಿರುವ ಗ್ರಂಥಕರ್ತರು ಯೊರೆಂದರೆ, ಕ್ಲೆಮೆಂಟ್ ಕ್ರಿ.ಶ. 96, ದಿದೇಶ್ 100, ಬಾರ್ನಬಾಸರ ಧರ್ಮಪತ್ರ 100, ಇಗ್ನೇಶಿಯಸ್ 115, ಪೋಲಿಕಾರ್ಪ್ 120, ಇತ್ಯಾದಿ ನಾಸ್ತಿಕ ಸಂಪ್ರದಾಯಕ್ಕೆ ಸೇರಿದ ವೇಲೆಂಟಿನಸ್ 130, ಎಂಬುವವನ್ನೂ ವಚನಗಳನ್ನು ಎತ್ತಿ ಹೇಳಿ ವಿರೋದಿಸಿದ್ದಾನೆ.

ಊಹಿಸಿನೋಡಿ, ನಮ್ಮ ದೇಶದ ರಾಜ್ಯಶಾಸನವನ್ನು ಒಂದು ಬೆಂಕಿ ಸುಟ್ಟು ಹಾಕಿ ನಾಶಮಾಡಿದಾಗ ನಮಗೆ ದುಃಖವಾಗುವುದು. ಆದರೂ ನಮಗೆ ಆ ಮೂಲಶಾಸನ ಏನು ಹೇಳುತ್ತದೆಂದು ತಿಳಿಯುವುದಿಲ್ಲವೆ? ಖಂಡಿತ ತಿಳಿದಿರುತ್ತದೆ, ನಮಗೆ ಆ ಶಾಸನದ ಮೂಲಪಾಠ ಚೆನ್ನಾಗಿ ತಿಳಿದಿದೆ, ಹೇಗೆಂದರೆ ನಮ್ಮ ಪಠ್ಯಪುಸ್ತಕಗಳಲ್ಲಿ, ದಿನಪತ್ರಿಕೆಗಳಲ್ಲಿ ಸಾವಿರಾರು ಸಾರಿ ಆ ಶಾಸನ ಇಡೀ ದೇಶದಲ್ಲಿ ಮುದ್ರಿತಗೊಂಡಿದೆ. ಸತ್ಯವೇದವು ಅದೇ ತರಹದ ದೃಢೀಕರಣವನ್ನು ಅನುಭೋಗಿಸುತ್ತದೆ. ಮೂಲಗ್ರಂಥವಿಲ್ಲದೆ, ಸತ್ಯವೇದದ ಮೂಲಪಾಠವನ್ನು ನಾವು ಸುಲಭವಾಗಿ ಯಾವ ತಪ್ಪಿಲ್ಲದೇ ಪುನಃರಚಿಸಬಹುದು.

## ಕೇಂದ್ರ ಅಂಶಗಳು

ಇಲ್ಲಿ ಹೊಸ ಒಡಂಬಡಿಕೆ ನಮಗೆ ಒಂದೂ ತಪ್ಪಿಲ್ಲದೆ ಬಂದಿದೆ. ಎಂಬ ವಿಷಯವನ್ನು ನಂಬಲು 8 ವಾಸ್ತವಿಕ ಕಾರಣಗಳನ್ನು ಕ್ಲಿಪ್ತವಾಗಿ ಹೇಳಲು ಅವಕಾಶಕೊಡಿ.

1. 24,600 ಪ್ರಾಚೀನ ಮೂಲಪ್ರತಿಗಳು : ಪ್ರಾಚೀನ ಇತಿಹಾಸದಲ್ಲೇ ಬಹಳ ಸಾಕ್ಷ್ಯಾಧಾರ ಮತ್ತು ದೃಢೀಕರಣ ಹೆಚ್ಚಾಗಿದೆ. ಇವೆಲ್ಲವೂ ತುಂಬಿ ತುಳುಕುವ ಸಾಕ್ಷ್ಯಾಧಾರಗಳಾಗಿವೆ. ನಮ್ಮಲ್ಲಿ ಕ್ರಿ.ಶ. 300 - 1000ವರೆಗೆ ಸಾವಿರಾರು ಮೂಲ ಪ್ರತಿಗಳಿವೆ. ಕ್ರಿ.ಶ. 100-300 ವರೆಗೆ ನೂರಾರು ಮೂಲಪ್ರತಿಗಳಿವೆ. ಈ ಸಂಖ್ಯೆ, ಬೇರೆ ಭಾಷೆಗಳಲ್ಲಿ ಅನುವಾದಿಸಲ್ಪಟ್ಟ ಪ್ರಾಚೀನ ಮೂಲ ಪ್ರತಿಗಳನ್ನೊಳಗೊಂಡಿಲ್ಲ, ಬೇರೆ ಭಾಷೆಗಳಲ್ಲಿ ಅನುವಾದಿಸಲ್ಪಟ್ಟ ಮೂಲ ಪ್ರತಿಗಳನ್ನು ಸೇರಿಸಿದರೆ ಅದರ ಸಂಖ್ಯೆ 40,000ಕ್ಕೂ ಹೆಚ್ಚಾದೀತು. ಇಷ್ಟೊಂದು ದೊಡ್ಡ ಖಚಿತ ಆಧಾರವನ್ನು ಯಾರೂ ಸುಮ್ಮನೆ ಹುಟ್ಟಿಸಿ ಹಾಕಲು ಖಂಡಿತ ಸಾಧ್ಯವಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ಎಲ್ಲಾ ಆಧಾರಗಳು ಹೊಸ ಒಡಂಬಡಿಕೆಯನ್ನು ಬಲವಾಗಿ ದೃಢಪಡಿಸುವುದೂ ಅಲ್ಲದೆ. ವಚನಗಳು ನಮಗೆ ಮೂಲ ಗ್ರಂಥದಿಂದ ಒಂದು ತಪ್ಪಿಲ್ಲದೆ ಇಳಿದು ಬಂದಿದೆ ಎಂಬುದಕ್ಕೆ ಸಾಕ್ಷಿಯಾಗಿವೆ.

2. ಘಟನೆಗಳು ನಡೆದ ತಕ್ಷಣವೇ ಬರೆಯಲ್ಪಟ್ಟಿದೆ : ಹೊಸ ಒಡಂಬಡಿಕೆಯು ಘಟನೆಗಳನ್ನು

ಕಣ್ಣಾರೆ ಕಂಡು ಹೇಳಿದ ಸಾಕ್ಷಿಗಳ ಸಂಗ್ರಹಣೆಯಾಗಿದೆ. ಆದ್ದರಿಂದ ಪೂರ್ತಿ ಹೊಸ ಒಡಂಬಡಿಕೆ ಕ್ರಿ.ಶ. 70ರ ಒಳಗೆ, ಎಂದರೆ ರೋಮನರು ಯೊರುಜಲೇಮನ್ನು ನಾಶಪಡಿಸುವುದಕ್ಕೆ ಮುನ್ನ ಬರೆಯಲ್ಪಟ್ಟಿದೆಯೆಂದು ನಮಗೆ ಮನದಟ್ಟಾಗಿದೆ. ಮೊದಲ ಪುಸ್ತಕ ಸುಮಾರು ಕ್ರಿ.ಶ. 40 ರಲ್ಲಿ ಬರೆದಿದೆ, ಅಂದರೆ ಯೇಸುಕ್ರಿಸ್ತರು ಪುನರುತ್ತಾನವಾದ 15 ವರ್ಷಗಳಲ್ಲಿ ಬರೆಯಲ್ಪಟ್ಟಿದೆ. ನಿಸ್ಸಂದೇಹವಾಗಿ, ಸತ್ಯವೇದವು ಮೊದಲ ಶತಮಾನದ ಮಧ್ಯದಲ್ಲಿ ಬರೆಯಲ್ಪಟ್ಟ ಗ್ರಂಥ, ಸತ್ಯವೇಧವೇ ಹೇಳಿಕೊಳ್ಳುವಂತೆ ಅದು ನಿಜವಾಗಿದೆ.

3. ಸಾವಿರಾರು ಕಣ್ಣಾರೆ ಕಂಡ ಸಾಕ್ಷಿಗಳು ಇನ್ನೂ ಜೀವಿಸುತ್ತಿದ್ದರು : ಹೊಸ ಒಡಂಬಡಿಕೆ ಬರೆಯುವಾಗ, ಸಾವಿರಾರು ಪ್ರತ್ಯಕ್ಷ ಕಂಡ ಸಾಕ್ಷಿಗಳು ಜೀವಂತವಾಗಿದ್ದರು, ಆದ್ದರಿಂದ ಅವರೆಲ್ಲಾ ಅವರು ಬರೆಯುವುದು ನಿಜವೋ, ಸುಳ್ಳೊ, ಎಂದು ಪರೀಕ್ಷಿಸುತ್ತಿದ್ದರು, ಅವರು ತಪ್ಪುಗಳಿಗೆ ಎಡೆಕೊಡಲಿಲ್ಲ ಮತ್ತು ಸುಳ್ಳು ಕಥೆಗಳನ್ನೂ ಸೇರಿಸಲಿಲ್ಲ.

4. ಬೇರೆ ಬೇರೆ ದೇಶದ ಗ್ರಂಥಾಲಯಗಳು ಅದನ್ನು ಒಪ್ಪಿಕೊಂಡಿದ್ದವು : ಅಲೆಕ್ಸಾಂಡ್ರಿಯ, ಸಿರಿಯಾ, ರೋಮ, ಕಾರ್ತೇಜ, ಕೊನ್ಸ್ಟಿಂಟೈನ್ ಇತ್ಯಾದಿ ದೇಶದ ಮೂಲ ಪ್ರತಿಗಳು ಎಲ್ಲವೂ ಒಮ್ಮತವಾಗಿದ್ದವು ಆಕಾಲದಲ್ಲಿ ದೂರವಾಣಿ ಯಂತ್ರ, ಫೇಕ್ಸ್ ಯಂತ್ರವೇನೂ ಇರಲಿಲ್ಲ ಆದರೂ ಈ ದೇಶಗಳ ಗ್ರಂಥಾಲಯಗಳು, ನೂರಾರು ಮೈಲಿ ದೂರದಲ್ಲಿದ್ದರೂ, ಒಂದು ತಪ್ಪಿಲ್ಲದೆ ಎಲ್ಲಾ ವಚನಗಳನ್ನು, ಒಂದೇ ತರಹವಾಗಿ ಹೊಂದಿರುವುದನ್ನು ನೋಡಿದರೆ ಇದೇ ಸತ್ಯವೇದಕ್ಕೆ ಒಂದು ದೊಡ್ಡ ಸಾಕ್ಷ್ಯಾಧಾರವಾಗಿದೆ. ಈ ತರಹದ ಬೇರೆ ಬೇರೆ ದೇಶದ ಗ್ರಂಥಗಳು ಒಮ್ಮತವಾಗಿರುವುದು ಮೂಲಪಾಠದ ಸತ್ಯಕ್ಕೆ ಬಲಗೊಟ್ಟಿದೆ.

5. ಪ್ರಾಚೀನ ಆರಾಧನೆ ಪುಸ್ತಕಗಳು ಉಳಿದಿವೆ : ಪ್ರಾಚೀನ ಧರ್ಮ ಸಭೆಗಳಲ್ಲಿ ಭಾನುವಾರ ಆರಾಧನೆ ಸಮಯದಲ್ಲಿ ವಚನಗಳನ್ನು ಓದುತ್ತಿದ್ದರು, ಇಡೀ ಹೊಸ ಒಡಂಬಡಿಕೆಯನ್ನು ಓದುವುದಕ್ಕಿಂತ, ತಿಕ್ಷ್ಣರೀಸ್ ಎಂಬ ಆರಾಧನೆ ಪುಸ್ತಕದಿಂದ ಆರಿಸಲ್ಪಟ್ಟ ವಚನಗಳನ್ನು, ಓದುತ್ತಿದ್ದರು. ಈ ಆರಾಧನೆ ಪುಸ್ತಕಗಳಲ್ಲಿ (ಕ್ರಿ.ಶ. 600ರ ರಿಂದ) ಆರಿಸಲ್ಪಟ್ಟ ಕೆಲವು ಅಚ್ಚುಮೆಚ್ಚಿನ ವಚನಗಳನ್ನು, ಜನರಿಗೆ ಭಾನುವಾರ ಆರಾಧನೆ ಸಮಯದಲ್ಲಿ ಓದಿ ಹೇಳಿದ್ದನು ಕಾಣಬಹುದು. ಹಾಡುಗಳಿಗೆ ಹೇಗೆ ಹಾಡು ಪುಸ್ತಕವಿದೆಯೋ ಹಾಗೆ ಆರಾಧನೆಗೆ ವಚನಗಳುಳ್ಳ ಆರಾಧನೆ ಪುಸ್ತಕವಿತ್ತು. ಪ್ರಾಚೀನ ಜಗತ್ತಿನಿಂದ ಈ ತರಹದ 2,200 ಆರಾಧನೆ ಪುಸ್ತಕಗಳನ್ನು ಗುರುತಿಸಲಾಯಿತು, ಅವೂ ವಚನಗಳ ಸತ್ಯಾಸತ್ಯತೆಯನ್ನು ಎತ್ತಿ ಹಿಡಿದುವು.

6. ಆ ಕಾಲದ ಧರ್ಮಪತ್ರಗಳಲ್ಲಿ ಮತ್ತು ಅನುದಿನ ಘಟಾನಾವಳಿ ಪುಸ್ತಕಗಳಲ್ಲಿ ವಚನಗಳನ್ನು ಎತ್ತಿ ಹೇಳಿದ. ಇದು ತುಂಬಾ ವಿಸ್ಮಯ ತರುವ ವಿಷಯವಾಗಿದೆ. ಹೇಗೆಂದರೆ ಎಲ್ಲಾ

ಮೂಲಪ್ರತಿಗಳನ್ನು ಎಲ್ಲಾ ಸತ್ಯವೇದಗಳನ್ನು ಸುಟ್ಟು ಹಾಕಿದರೂ, ನಮಗೆ ಹೊಸ ಒಡಂಬಡಿಕೆ ಪೂರ್ತಿಯಾಗಿ (11 ವಚನಗಳನ್ನು ಬಿಟ್ಟು) ಪುನರಚಿಸಲು ಸಾಧ್ಯವಾಗಿದೆ. ಯಾಕೆಂದರೆ ಆ ಕಾಲದ ಧರ್ಮಪತ್ರಗಳಲ್ಲಿ ಸತ್ಯವೇದ ವಿವರಣೆ ಪುಸ್ತಕಗಳಲ್ಲಿ 80,000ಕ್ಕಿಂತ ಹೆಚ್ಚು ಸಾರಿ ವಚನಗಳನ್ನು ಎತ್ತಿ ಹೇಳಿವೆ. ಆದ್ದರಿಂದ ನಮಗೆ ಮೂಲಗ್ರಂಥ ಮತ್ತು ಮೂಲಪ್ರತಿಗಳಿಲ್ಲದೆಯೇ, ಪೂರ್ತಿ ಸತ್ಯವೇದವನ್ನು ಒಂದೂ ತಪ್ಪಿಲ್ಲದೆ ಈ ಪತ್ರಗಳ ಆಧಾರದಿಂದ ಪುನಃರಚಿಸಬಹುದು.

7. ಪ್ರಾಚೀನ ಅನುವಾದಗಳು ಕ್ರಿ.ಶ. 150-250, ರ ಕೊಪ್ಟಿಕ್, ಲಾತಿನ್ ಮತ್ತು ಸಿರಿಯಾಕ್ ಭಾಷೆಗೆ ಅನುವಾದದಗೊಂಡ ಗ್ರಂಥಗಳು, ಮೂಲಪಾಠದ ಪದಗಳನ್ನು ಸರಿಯಾಗಿ ಭಾಷಾಂತರ ಮಾಡಿರುವುದು ಇನ್ನೊಂದು ಸಾಕ್ಷಿಯಾಗಿದೆ. ನಾನು ಮೊದಲೇ ಹೇಳಿರುವ ಹಾಗೆ ಈ ಬಾಷಾಂತರಗೊಂಡ ಮೂಲ ಪ್ರತಿಗಳನ್ನು ಸೇರಿಸಿದರೆ ನಮ್ಮಲ್ಲಿರುವ ಮೂಲಪ್ರತಿಗಳ ಸಂಖ್ಯೆ 40,000ವನ್ನು ಮೀರಿಸುತ್ತದೆ.

8. ಕೊಯಿನ್ ಗ್ರೀಕ್ ಎಂಬ ಹಳೆಯ ಗ್ರೀಕ್ ನುಡಿಗಟ್ಟಿನ ವಿಶಿಷ್ಠ ಗುಣ : ಬಹಳ ಕಾಲದಿಂದ ಹೊಸ ಒಡಂಬಡಿಕೆಯೊಂದೇ ಹಳೆಯ ಕೊಯಿನ್ ಗ್ರೀಕ್ ನುಡಿಗಟ್ಟಿಗೆ ಉದಾಹರಣೆಯಾಗಿತ್ತು. ಇತ್ತೀಚೆಗೆ ದೊರೆತಿರುವ ಜಂಬು ಕಾಗದದ ಮೂಲ ಪ್ರತಿಗಳು ಆ ನುಡಿಗಟ್ಟಿನ ವಿಶಿಷ್ಠ ಗುಣಗಳು ಸತ್ಯವೆಂದು ನಿರೂಪಿಸಲ್ಪಟ್ಟವು. ಆ ಕೊಯಿನ್ ಗ್ರೀಕ್ ನುಡಿಗಟ್ಟನ್ನು, 5 ಅಥವಾ 6 ಶತಮಾನಗಳ ನಂತರ ಯಾರು ಸುಮ್ಮನೆ, ಹುಟ್ಟಿಸಲು ಅಸಾಧ್ಯ, ಆದ್ದರಿಂದ ಹೊಸ ಒಡಂಬಡಿಕೆ ಮೊದಲ ಶತಮಾನದಲ್ಲಿ ಬರೆದದ್ದೆಂದು ಸಾಬಿತಾಯಿತು.

ನಮ್ಮಲ್ಲಿರುವ ಮೂಲಗ್ರಂಥ ಪ್ರಾಚೀನ, ಒಂದೂ ತಪ್ಪಿಲ್ಲದೆ ಬಂದಿದೆ ಮತ್ತು ತುಂಬಿ ತುಳುಕುವ ಸಾಕ್ಷ್ಯಾಧಾರಗಳನ್ನು ಹೊಂದಿದೆ. ಹೊಸ ಒಡಂಬಡಿಕೆಯ ಸತ್ಯಾಸತ್ಯತೆ ನಿಸ್ಸಂದೇಹವಾಗಿದೆ. ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ತಪ್ಪಿಲ್ಲದೆ ಇಳಿದು ಬಂದಿರುವುದು ನಂಬಿಕಾರ್ಹವಾಗಿದೆ. ಹೊಸ ಒಡಂಬಡಿಕೆ ಸತ್ಯಾಸತ್ಯತೆಯ ಎಲ್ಲಾ ಪರೀಕ್ಷೆಗಳನ್ನು ಪೂರ್ಣ ಜಯಶಾಲಿಯಾಗಿದೆ. ಕಳೆದ ಎರಡು ಶತಮಾನಗಳಲ್ಲಿ ದೊರಕಿರುವ ಮೂಲಪ್ರತಿಗಳ ಸಾಕ್ಷಿ ಎಲ್ಲಾ ವಿಮರ್ಶಕರ ಬಾಯಿ ಮುಚ್ಚಿಸಿದೆ. ನೀವು ಹೊಸ ಒಡಂಬಡಿಕೆಯನ್ನು ಓದುವಾಗ, ಅವು ಗ್ರಂಥಕರ್ತನ ಸ್ವಂತ ಮಾತುಗಳೆಂದು ನೀವು ತುಂಬಾ ಭರವಸೆಯಿಂದ ನಂಬಬಹುದು. ಎರಡು ಶತಮಾನಗಳ ನಿರಂತರ ಕಟು ವಿಮರ್ಶೆಯಿಂದ ಈಗ ಸತ್ಯವೇದ ತುಂಬಾ ಘನತೆಯನ್ನು ಪಡೆದಿದೆ ಮತ್ತು ಎಲ್ಲಾ ವಿಮರ್ಶಕರು ತಾವು ತಪ್ಪೆಂದು ಒಪ್ಪಿಕೊಂಡಿದ್ದಾರೆ.

ಸರ್ ಫ್ರೆಡ್‌ರಿಕ್ ತಿನ್ಯೊನ್ ಎಂಬ ಉನ್ನತ ಅಧಿಕಾರಿ ಮತ್ತು ಬ್ರಿಟನ್ ದೇಶದ ವಸ್ತು ಸಂಗ್ರಹಾಲಯದ ಗ್ರಂಥಾಧಿಕಾರಿ ಎಲ್ಲಾ ವಿಷಯಗಳಲ್ಲಿ ತುಂಬಾ ಪ್ರಭಾವವಿದ್ದು, ಮೂಲಪ್ರತಿಗಳ

ವಿಷಯದಲ್ಲಿ ಹೀಗೆಂದಿದ್ದಾರೆ, ಮೊದಲ ಗ್ರಂಥ ರಚನೆಗೂ, ಮತ್ತು ಮೋದಲ ಸಾಕ್ಷ್ಯಧಾರಕ್ಕೂ ನಡುವೆ ಅಂತರ ಬಹಳ ಸ್ವಲ್ಪವಾಗಿದ್ದು, ಏನು ಅಂತರವೇ ಇಲ್ಲವೋ ಎಂಬಷ್ಟು ತೃಣವಾಗಿದೆ, ಮತ್ತು ವಚನಗಳು ನಮಗೆ ಏನು ತಪ್ಪಿಲ್ಲದೆ ಹರಿದು ಬಂದಿವೆ ಎಂಬ ಸತ್ಯವನ್ನು ಸಂದೇಹಕ್ಕೆ ಆಸ್ಪದ ಕೊಡುವ ಎಲ್ಲಾ ಮೂಲಗಳನ್ನು ತೆಗೆದು ಹಾಕುತ್ತದೆ. ಹೊಸ ಒಡಂಬಡಿಕೆಯ ಸತ್ಯಾಸತ್ಯತೆ ಮತ್ತು ಅದರ ಸಂಪೂರ್ಣತೆ ಯಾವ ಸಂದೇಹವೂ ಇಲ್ಲದೆ ಅಂತಿಮವಾಗಿ ತೀರ್ಮಾನವಾಗಿದೆ.

ನಾನು ಪರಿಚಯ ಮಾಡಿದ ಎಷ್ಟೋ ಕ್ರೈಸ್ತರು, ವಚನಗಳು ನಮಗೆ ತಪ್ಪಿಲ್ಲದೆ ಹರಿದು ಬಂದಿವೆ ಎಂಬ ಸಣ್ಣ ನಂಬಿಕೆಯನ್ನು ತೋಡಿಕೊಳ್ಳಲು ಸಂಕೋಚಗೊಳ್ಳುತ್ತಾರೆ, ಹೌದು ಸತ್ಯವೇದದಲ್ಲಿನಾನು ನಂಬುತ್ತೇನೆ ಎಂದು ಹೇಳುವಾಗ ಅವರ ಮುಖದಲ್ಲಿ ಒಂದು ತರಹದ ಅಂಜುಬುರುಕ, ಭಾವವಿರುತ್ತದೆ. ಆದರೆ ಅವರು ನಿಜವಾಗಿ ಅದರಲ್ಲಿ ಮೊದಲಗ್ರಂಥಕರ್ತನ ಮಾತುಗಳಿವೆ ಎಂದು ನಿಜವಾಗಿ ನಂಬುತ್ತಾರೆ. ಆದರೆ ಹೊಸ ಒಡಂಬಡಿಕೆ ಕಳೆದ ಕೆಲವು ದಶಕಗಳಿಂದ ಅದಕ್ಕೆ ಎದುರಾಗುವ ಎಲ್ಲಾ ತರಹದ ಆಕ್ರಮಣಗಳಂದ ಜಯಿಸಿ ಒಂದು ಸೌಧದ ಹಾಗೆ ನಿಂತಿದೆ ಎಂಬ ತಿಳುವಳಿಕೆ ಅವರಿಗೆ ಇಲ್ಲ. ನಿಜ ಏನೆಂದರೆ, ವಿಮರ್ಶಕರ ಆಕ್ರಮಣಗಳಿಂದ ನುಚ್ಚುನೂರಾಗುವ ಬದಲು ಅದು ಇನ್ನೂ ಭಲವಾಗಿ ಎದ್ದು ನಿಂತಿದೆ. ಸಾವಿರಾರು ಪ್ರಾಚೀನ ಮೂಲಪ್ರತಿಗಳ ಆಧಾರ, ಅದರ ಸತ್ಯಾಸತ್ಯತೆಯನ್ನು, ಸಂಪೂರ್ಣತೆಯನ್ನು ಬಲಪಡಿಸುತ್ತದೆ. ಕ್ರೈಸ್ತರು ವಚನಗಳ ಬಗ್ಗೆ ಪೂರ್ಣ ಭರವಸೆಯಿಂದಿರಬೇಕು, ನೀವು ಹೊಸ ಒಡಂಬಡಿಕೆ ಓದುವಾಗ, 2000 ವರ್ಷಗಳ ಹಿಂದೆ ಗ್ರಂಥಕರ್ತರು ಬರೆದ ಅದೇ ಮಾತುಗಳನ್ನು ಓದುತ್ತೀರಿ. ನಾವು ನಾಚಿಕೊಳ್ಳುವುದಕ್ಕೆ ಯಾವ ಅಗತ್ಯವೂ ಇಲ್ಲ, ಅದನ್ನು ಕೆಲವು ದಶಕಗಳ ಹಿಂದಿನ ವಿಮರ್ಶಕರಿಗೆ ಬಿಡಿ.

## ಅಧ್ಯಾಯ 4

### ಮೂಲ ಪಾಠದಲ್ಲಿರುವ ಭಿನ್ನತೆಯ ಬಗ್ಗೆ ಏನು ಹೇಳುವಿರಿ ?

ನಾವು ಮೊದಲೇ ತಿಳಿಸಿರುವ ಪ್ರಕಾರ ಹೊಸ ಒಡಂಬಡಿಕೆಯ ಮೂಲಗ್ರಂಥಗಳು ನಮಗೆ ದೊರೆತಿಲ್ಲ. ನಮ್ಮಲ್ಲಿರುವುದು ಕಳೆದ ಶತಮಾನಗಳಿಂದ ಎಷ್ಟೊ ಧರ್ಮಸಭೆಗಳಿಗೆ ಹರಿದು ಬಂದಿರುವ ಮೂಲ ಪ್ರತಿಗಳು, ಈ ಪ್ರತಿಗಳಲ್ಲಿ ತಪ್ಪುಗಳಿವೆ, ಬರವಣಿಗೆಗಾರರು ತಪ್ಪು ಮಾಡೇ ಮಾಡುತ್ತಾರೆ. ಯಾವ ಮನುಷ್ಯನ ಕೈಯೂ ತಪ್ಪೂ ಮಾಡದಷ್ಟು ಪರಿಪೂರ್ಣವಲ್ಲ, ಕೆಲವು ವಿಮರ್ಶಕರು, ಗ್ರೀಕ್ ಮೂಲಪ್ರತಿಗಳು ಎಲ್ಲವೂ ಒಮ್ಮತವಾಗಿಲ್ಲ ಎಂದು ಬಹುಬೇಗ ಸೂಚಿಸಿದರು, ಪದಗಳು ಮತ್ತು ವಿರಾಮ ಚಿಹ್ನೆಗಳಲ್ಲಿ ವ್ಯತ್ಯಾಸವಿದೆ. ಎಷ್ಟು ತಪ್ಪುಗಳಿವೆ ಎಂದು ಹೇಳುವುದು? ಒಬ್ಬ ವಿದ್ವಾಂಸ ಸುಮಾರು 200,000 ತಪ್ಪುಗಳಿವೆ ಎಂದು ಬಹು ವರ್ಷಗಳ ಹಿಂದೆ ಊಹಿಸಿದರು. ಆದರೆ ಇತ್ತೀಚೆಗೆ ಆದ ಅಂದಾಜಿನ ಪ್ರಕಾರ 300,000 ವ್ಯತ್ಯಾಸಗಳಿವೆ ಎಂದು ತಿಳಿದು ಬಂದಿದೆ. ಎಂದರೆ ನಿಜವಾಗಿ ಹೊಸ ಒಡಂಬಡಿಕೆಯ ಮೂಲ ಪಾಠದಲ್ಲಿ ಸುಮಾರು 300,000 ಭಿನ್ನತೆಗಳಿವೆ.

ನಾನು ಈ ಸಂಖ್ಯೆಯನ್ನು ಸರಿಯೆಂದು ಒಪ್ಪುತ್ತೇನೋ? ಆದರೆ ವಾಸ್ತವವಾಗಿ ಅದು ಸ್ವಲ್ಪ ಕಡಿಮೆಯೂ ಇರಬಹುದು ಎಂದು ನಾನು ಯೋಚಿಸುತ್ತೇನೆ. ಅದು ವಚನಗಳಲ್ಲಿರುವ ನನ್ನ ನಂಬಿಕೆಯನ್ನು ಅಲ್ಲಾಡಿಸುವೂದೋ? ಖಂಡಿತ ಇಲ್ಲ. ಏಕೆಂದರೆ ಇಲ್ಲಿ ನಾನು ವಿವರಿಸುತ್ತೇನೆ.

ದೇವರು ಮೂಲಗ್ರಂಥಕರ್ತಕರನ್ನು ಪ್ರೇರೆಪಿಸಿದರೂ, ಪ್ರತಿಗಳನ್ನು ತೆಗೆದವರು ತುಂಬಾ ಶ್ರದ್ಧೆಯುಳ್ಳ, ಜಾಗರೂಕರಾದ ಆದರೂ ನಮ್ಮಂತ ಮನುಷ್ಯನ ಕೈಗಳ ಕೆಲಸ. ಪ್ರತಿಗಳನ್ನು ತೆಗೆಯುವವರು ಸರಿಯಾಗಿ ತಪ್ಪಿಲ್ಲದ ಪ್ರತಿಗಳನ್ನು ತೆಗೆಯಲು ತುಂಬಾ ಉತ್ಸಾಹ ಭರಿತರಾಗಿದ್ದರೂ, ಅವರು ಅಲ್ಲಲ್ಲಿ ಕೆಲವು ತಪ್ಪುಗಳನ್ನು ಮಾಡೇ ಮಾಡಿದರು. ದೇವರು ಪ್ರತಿ ಸಾರಿ ಪ್ರತಿಗಳನ್ನು ತೆಗೆಯುವಾಗ ಒಂದು ಅದ್ಭುತ ಮಾಡಲಿಲ್ಲ. ತಪ್ಪುಗಳು ಆಗೇ ಆಗುತ್ತವೆ. (ಆಗ ಮಾತ್ರವಲ್ಲ ಈಗಲೂ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಹೋಗುವಾಗ ಕೆಲವು ತಪ್ಪುಗಳಾಗುತ್ತವೆ. ಹಾಗೆಯೇ ಆಂಗ್ಲ ಭಾಷೆಯಲ್ಲಿಯೂ 200 ತಪ್ಪುಗಳಾದವು.)

ಆದರೆ ಅದು ಹೇಗಾಯಿತು ನೋಡೋಣ, ಮೂಲಪಾಠದ ಭಿನ್ನತೆ ಎಂದು ಹೇಳಿಕೊಳ್ಳುವ ಈ ತಪ್ಪುಗಳು, ಬೇರೆ ಬೇರೆ ಗ್ರೀಕ್ ಪ್ರತಿಗಳಿಂದ ಬೇರೆ, ಬೇರೆ ಶತಮಾನಗಳಲ್ಲಿ ಬರುವ ತಪ್ಪುಗಳನೆಲ್ಲಾ ಒಂದು ಪಟ್ಟಿ ಮಾಡಿಟ್ಟಿದ್ದಾರೆ, ಅದು ಒಂದೇ ತಪ್ಪಾಗಿದ್ದರೂ

ಅದು ಅನೇಕ ಹಸ್ತಪ್ರತಿಗಳಲ್ಲಿ ಪದೆ ಪದೆ ಬಂದಿದೆ. ಈ 24000 ಹಳೆಯ ಗ್ರೀಕ್ ಹಸ್ತ ಪ್ರತಿಗಳಿರುವ ಕಾರಣದಿಂದ ನೀವು ಇಂತಹ ವ್ಯತ್ಯಾಸಗಳು ಬಹಳವಾಯಿತೆಂದು ನೋಡಬಹುದು. ಅದೆ ರೀತಿಯಲ್ಲಿ ಇನ್ನಷ್ಟು ಹಸ್ತಪ್ರತಿಗಳು ಸಿಕ್ಕಿ ಅದನ್ನು ಪರೀಕ್ಷಿಸಿದರೆ, ವ್ಯತ್ಯಾಸಗಳು ಇನ್ನಷ್ಟು ಬೆಳೆಯುವುದು.

ಹಸ್ತ ಪ್ರತಿಗಳು ಕುಟುಂಬಗಳಲ್ಲಿ ಬೆಳೆದಿದ್ದು. ಹಳೇಯ ಹಸ್ತಪ್ರತಿಗಳು ದೊಡ್ಡ ಸಭೆಗಳಿರುವ ಹಲವಾರು ಪಟ್ಟಣಗಳಲ್ಲಿ ಅನುಕರಣೆ ಮಾಡುತ್ತಿದ್ದರು. ರೋಮ, ಕಾನ್ಸ್‌ಟಾಂಟಿನೊಪಲ್, ಅಂಟಿಯೋಕ್ ಮತ್ತು ಅಲೆಕ್ಸಾಂಡ್ರಿಯ, ಇವೆ ಮುಖ್ಯವಾದ ಗ್ರಂಥಾಲಯಗಳಿರುವ ಕೆಲವು ಪಟ್ಟಣಗಳು. ಈ ಹಸ್ತಪ್ರತಿಗಳನ್ನು ಅನುಕರಣ ಮಾಡುತ್ತಿರುವಾಗಲೆ ವ್ಯತ್ಯಾಸಗಳು ತಲತಲಾಂತರಗಳಲ್ಲಿ ಉಂಟಾಗುತ್ತಿದ್ದವು. ಕೆಲವು ಸಾರಿ ಅದೆ ತಪ್ಪು ಹಲವು ಭಾರಿ ಅನುಕರಣೆ ಮಾಡುತ್ತಿದ್ದರು. ಪ್ರತಿಯೊಂದು ಸಾರಿ ಅದೇ ತಪ್ಪು ಮಾಡಿದರೂ ಅದನ್ನು ಗ್ರಂಥದಲ್ಲಿರುವ ಹೊಸ ವ್ಯತ್ಯಾಸವೆಂದು ಎಣಿಸುತ್ತಿದ್ದರು ಈಗ ನಮ್ಮಲ್ಲಿ ಹಳೆಯ ಹಸ್ತಪ್ರತಿಗಳು ಸಿಕ್ಕಿರುವ ಕಾರಣ ಪಂಡಿತರು ಎಲ್ಲಾ ಅನುಕರಣದ ತಪ್ಪುಗಳನ್ನು ತೆಗೆದು ಹಾಕಿದ್ದಾರೆ.

ರೂಡಿಗೆ ಈ ತಪ್ಪುಗಳು ವಾಕ್ಯಗಳ ಅರ್ಥದಲ್ಲೇನು ವ್ಯತ್ಯಾಸ ತೋರಿಸುತ್ತಿರಲಿಲ್ಲ. ಕೆಲವು ಸಾರಿ ಪದಗಳ ಅಕ್ಷರಗಳು ತಪ್ಪಾಗಿ ಬರೆದಿದ್ದರು. ಇನ್ನಷ್ಟು ಸಾರಿ ಪದಗಳನ್ನು ಅದಲು ಬದಲು ಮಾಡಿ ಬರೆದಿದ್ದರು. ಅನುಕರಣೆ ಮಾಡುವವರು "ಯೇಸು ಕ್ರಿಸ್ತ" ಎಂದು ಬರೆಯುವ ಬದಲಾಗಿ "ಕ್ರಿಸ್ತ ಯೇಸು" ಎಂದು ಬರೆದಿದ್ದರು. ಕೆಲವು ಸಾರಿ "ಗಾಗಿ" ಅಥವಾ "ಮತ್ತು" ಅನ್ನೋ ಪದಗಳನ್ನು ಮರೆತು ಬಿಡುತ್ತಿದ್ದರು. ಕೆಲವು ಬಾರಿ ಸೇರಿಸುತ್ತಿದ್ದರು, ಕೆಲವು ಸಾರಿ ಅನುಕಾರಣಿಕ ಅವನಿದ್ದ ಸಮಯದ ತಕ್ಕ ಹಾಗೆ ಪದಗಳ ಅಕ್ಷರಗಳನ್ನು ಬಳಸಲು ಮೂಲದಿಂದ ಬದಲಿಸುತ್ತಿದ್ದ. (ಆಲೋಚನೆ ಮಾಡಿ ನೋಡಿ, ನೂರಾರು ವರ್ಷಗಳಿಂದ ಅಂಗ್ಲ ಭಾಷೆ ಎಷ್ಟೊಂದು ಬದಲಾವಣೆ ಹೊಂದಿದೆ). ಹಸ್ತ ಪ್ರತಿಗಳನ್ನು ಪರೀಕ್ಷಿಸಿ ನೋಡಿದಾಗ ಬಹಳ ಹಳೆಯದಕ್ಕೆ ಪ್ರಾಶಸ್ತ್ಯೆ ಕೊಟ್ಟಾಗ, ಈ ತರಹದ ತಪ್ಪುಗಳನ್ನು ಕಂಡು ಹಿಡಿದು ಸರಿಪಡಿಸಬಹುದು. ಬಹಳ ವ್ಯತ್ಯಾಸಗಳು ಈ ಪ್ರಕಾರಕ್ಕೆ ಸೇರುತ್ತದೆ.

ಹಿಂದಕ್ಕೆ ನೋಡಿದಾಗ, ಪಂಡಿತರು ತಪ್ಪುಗಳನ್ನು ಸುಲಭವಾಗಿ ಕಂಡುಹಿಡಿದು ಸರಿಪಡಿಸದ್ದಾರೆ. ಎಲ್ಲವನ್ನು ಹೇಳಿದ ನಂತರ ನೋಡಿದರೆ, ಯಾವುದೆ ನಂಬಿಕೆ ಮೂಡಿಸುವ ಕೃತ್ಯಗಳಿಗೆ ಈ ವ್ಯತ್ಯಾಸಗಳಿಂದ ಹಾನಿಯಾಗಿಲ್ಲ. ನಂಬಿಕೆ, ಜ್ಞಾನಸ್ನಾನ, ರಕ್ಷಣೆ ಅಥವಾ ನಿತ್ಯ ಜೀವನದ ಯಾವುದೇ ಮುಖ್ಯ ವಚನಗಳಿಗೆ ಹಾನಿಯಾಗಿಲ್ಲ. ಯಾವುದೆ ದೈವಿಕ ಆಜ್ಞೆ ಪ್ರಶ್ನಿಸುವಂತಿಲ್ಲ. ಸತ್ಯವೇದದ ಅಡಿ ಟಿಪ್ಪಣಿ ಓದಿದ್ದರೆ ಸ್ಪಷ್ಟವಾಗುತ್ತದೆ. ಎಲ್ಲಾ ಸರಿಯಾದ ತಳಪಾಯದ ಮೇಲೆ ಆದಾರವಾಗಿದೆಯೆಂದು.

ಕೆಂಬ್ರಿಡ್ಜ್ ಪಂಡಿತರಲ್ಲಿ ಬಿ.ಎಫ್. ವೆಸ್ಕಾಬ್ ಮತ್ತು ಎಫ್.ಜೆ.ಎ.ಹಾರ್ಟ್‌ರವರು ಗ್ರೀಕ್ ಭಾಷೆಯ ಹೊಸ ಒಡಂಬಡಿಕೆಯ ದೊಡ್ಡ ವಿದ್ವಾಂಸರು.

ಗ್ರಂಥದ ಟೀಕೆಗಳನ್ನು ಬಹಳ ಅಲ್ಪವೆನ್ನುತ್ತಾರೆ. ಕೃತ್ಯಗಳಲ್ಲಿ ಕಂಡು ಬರುವ ವ್ಯತ್ಯಾಸಗಳು ಮೂಲ ಕೃತ್ಯಕ್ಕೆ ಹೋಲಿಸಿ ನೋಡಿದರೆ ಅದು ಬರಿ ಸಾವಿರಕ್ಕೆ ಒಂದು ಭಾಗದಷ್ಟು ಮಾತ್ರ ಎಂದು ಇವರು ಬರೆದಿದ್ದಾರೆ.

ಒಂದು ಹಸ್ತ ಪ್ರತಿಯಲ್ಲಿ ವ್ಯತ್ಯಾಸಗಳು ಕಂಡು ಬಂದಾಗ ಅದನ್ನು ಬೇರೆಯ ಹಳೆಯ ಹಸ್ತ ಪ್ರತಿಗಳಿಗೆ ಹೋಲಿಸಿ ನೋಡಲಾಗುವುದು ಮತ್ತು ಯಾವುದು ಮೂಲ ಪ್ರರಿಯೆಂದು ನಿರ್ಧಾರ ಮಾಡಲಾಗುವುದು ಎಂದು ಡಾ|| ಡಗ್ಲಸ್ ಜಾಕೋಬಿ ವಿಶ್ಲೇಷಿಸಿದ್ದಾರೆ. 99% ತನಕ ಎಲ್ಲಾ ಪಂಡಿತರು ಒಂದೆ ತಿರ್ಮಾನಕ್ಕೆ ಬರುತ್ತಾರೆ (ಇಲ್ಲದಿದ್ದರೆ, ಈ ಅಲ್ಪ ವ್ಯತ್ಯಾಸಗಳನ್ನು ಅಡಿ ಟಿಪ್ಪಣಿಯಲ್ಲಿ ಬರೆದಿಡುತ್ತಾರೆ). ನಾನು ಹೇಳ ಬಯಸುತ್ತೇವೆಂದರೆ ವ್ಯತ್ಯಾಸಗಳು ಸಂಪೂರ್ಣವಾಗಿ ಗಮನಿಸುವಂತದಲ್ಲ.

ಕೃತ್ಯದಲ್ಲಿರುವ ಯಾವುದೇ ವ್ಯತ್ಯಾಸಗಳು ಗಮನಿಸುವಂತದಲ್ಲ. ಕಣ್ಣಾರೆ ಕಂಡ ಸಾಕ್ಷ್ಯಗಳು ಮತ್ತು ನಂಬುವಂತಹುದೆ ಈಗ ನಮ್ಮ ಬಳಿ ಇರುವ ಹೊಸ ಒಡಂಬಡಿಕೆ ಆದರೆ ನಿರ್ಧಾರ ನಿಮಗೆ ಬಿಟ್ಟಿದು ನಂಬುವುದೋ ಬಿಡುವುದೇ ಎಂದು ಪ್ರಾಮಾಣಿಕವಾಗಿ ಹುಡುಕುವವರು, ಊಹೆ ಮಾಡದೆ ಕೃತ್ಯಗಳಲ್ಲಿನ ತೊಂದರೆಗಳನ್ನು ಅಡಗಿಸುವುದಿಲ್ಲ. ಕೃತ್ಯ ಖಚಿತವಾಗಿಯೆ ಇದೆ ಮತ್ತು ಅದು ನಮ್ಮ ಕೈಗೆ ಯಾವುದೆ ಹಾನಿ ಇಲ್ಲದೆ ತಲುಪಿದೆ ಅದು ನಮ್ಮ ಗೌರವ ಮತ್ತು ಗಮನ ಮಾತ್ರ ಸೆಳೆಯದೆ ನಮ್ಮ ಹೃದಯವನ್ನು ಕೂಡ ತಾಕುತ್ತದೆ.

# ಹಳೆ ಒಡಂಬಡಿಕೆ ಎಷ್ಟು ಖಚಿತವಾದುದು?

ಕಳೆದ ಕೆಲವು ಶತಮಾನಗಳಲ್ಲಿ ಹೊಸ ಒಡಂಬಡಿಕೆ ನಿಜವಾಗಿಯೆ ನಡೆದ ಘಟನೆಯೆಂದು ಮನದಟ್ಟಾಗಿರುವುದು ಬಹಳ ಉತ್ಸಾಹವಾದ ವಿಷಯ. ಆದರೆ ಹಳೆ ಒಡಂಬಡಿಕೆಯ ವಿಷಯ ಏನು? ಅದರ ಗ್ರಂಥಗಳು ಎಷ್ಟರ ಮಟ್ಟಿಗೆ ಖಚಿತವಾಗಿ ಕಾಪಾಡಿರುವುದು?

1946ರಲ್ಲಿ ಒಬ್ಬ ಪ್ರಾಚೀನ ವಸ್ತು ಶಾಸ್ತ್ರನಿಗೆ, ಯಾವುದನ್ನು ಕಂಡು ಹಿಡಿಯುವುದು ನಿನ್ನ ಕನಸು ಎಂದು ಕೇಳಿದರೆ ಹಳೆ ಒಡಂಬಡಿಕೆಯನ್ನು ಖಚಿತಪಡಿಸುವುದೆಂದು ಉತ್ತರಿಸಿರುವನು. ಯೂದರು ಬಹಳ ಕಷ್ಟಪಟ್ಟು ಈ ಗ್ರಂಥಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಹಳೆ ಒಡಂಬಡಿಕೆಯ ಪ್ರತಿಯೊಂದು ಹಸ್ತ ಪ್ರತಿಯನ್ನು ಬಹಳ ಪರಿಶ್ರಮದಿಂದಲೂ ಮತ್ತು ದೃಢಪ್ರಯತ್ನದಿಂದಲೂ ಖಚಿತವಾಗಿರಬೇಕೆಂದು ತಲತಲಾಂತರದಿಂದ ಕಾಪಾಡಿಕೊಂಡು ಬಂದಿದ್ದಾರೆ. ಮುಂಬರುವ ಜನಾಂಗ ಓದುವುದಕ್ಕೆ ಹಳೆ ಹಸ್ತ ಪ್ರತಿಯನ್ನು ನಕಲು ಮಾಡಲು ಬಹಳ ಶ್ರಮಪಟ್ಟಿದ್ದಾರೆ. ಮಣ್ಣಾಗಿರುವ ಅಥವಾ ಹಾನಿಯಗಿರುವ ಪ್ರತಿಗಳನ್ನು ನಾಶ ಮಾಡುತ್ತಾರೆ. ಕೆಲವು ಪ್ರತಿಗಳನ್ನು ಶಾಲೆಗಳಿಗೆ ಕಳುಹಿಸುತ್ತಾರೆ. ಅಲ್ಲಿಯ ಉಪಯೋಗಕ್ಕಾಗಿ, ಒಂದಲ್ಲಾ ಒಂದು ರೀತಿಯಲ್ಲಿ ಹಳೆ ಪ್ರತಿಗಳು ನಾಶವಾಗಿ ಹೋಗುತ್ತದೆ. ಹಳೆ ಪ್ರತಿಯನ್ನು ಸಂಪ್ರದಾಯಕವಾಗಿ ಹೂತಿಡುತ್ತಿದ್ದರು. ಇಂತಹ ಮೂಢನಂಬಿಕೆಯ ಗೌರವ ಆ ವಚನಗಳಿಗೆ ಹಾಗೂ ಅದನ್ನು ಬರೆಯುವ ವಸ್ತುವಿನ ಮೇಲೆ ತೋರಿಸುತ್ತಿದ್ದರು.

ಆದಕ್ಕಾಗಿಯೆ ಹಳೇ ಒಡಂಬಡಿಕೆಯು ಖಚಿತವಾದದ್ದು ಎಂದು ಸಂಪೂರ್ಣವಾಗಿ ನಂಬಿದ್ದರು. ಆದರೂ ಹಳೆ ಪ್ರತಿಗಳು ಭರವಸೆ ಮೂಡಿಸುವಂತಹುದೆಂಬುದು ಕೊರೆಯಾಗಿತ್ತು. ಪಂಡಿತರು ಉಪಯೋಗಿಸಿದ ಹಳೆ ಒಡಂಬಡಿಕೆ ಸುಮಾರು ಕ್ರಿಸ್ತಶಕ 900 ರಿಂದ 1000ರ ಹಳೆಯದು. ಈ ಪ್ರತಿಗಳು ಖಚಿತವಾದದ್ದೇ? ಎಷ್ಟು ನ್ಯಾಯವಲ್ಲದ್ದು ಹಳೆ ಒಡಂಬಡಿಕೆ? ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕಾದ ವಿಷಯ ಅಂದರೆ - ಹಳೆ ಒಡಂಬಡಿಕೆ ಒಂದು ಸಾವಿರ ವರ್ಷಗಳ ಅಂತರದಲ್ಲಿ ಬರೆದಿದ್ದು (ಕ್ರಿಸ್ತ ಪೂರ್ವ 1400 (ಮೊಶೆಯ) ರಿಂದ 400 ಕ್ರಿಸ್ತಪೂರ್ವ (ಮಲಾಕಿಯ) ವರೆಗೆ. ಹಳೆಯ ಪ್ರತಿಯು ಕ್ರಿಸ್ತ ಸಕ 925 ದಿನಾಂಕದ್ದು. ಅದು 1300 ವರ್ಷಗಳ ಅಂತರದ್ದು. ಈ ಅಂತರದಲ್ಲಿ ಪ್ರತಿಗಳು ಭ್ರಷ್ಟವಾದವೆ? ಪ್ಲಾಟೊ ಅಥವಾ ಅರಿಸ್ಟಾಟಲ್‌ರ ಪ್ರಕಾರ ನಾವು ಸುಮಾರಾಗೆ ಇದ್ದೇವೆ. ಹಳೆ ಒಡಂಬಡಿಕೆ ನಿಶ್ಚಯಗೊಂಡಿತು. ಆದರೂ ಎರಡನೇ ಮಹಾಯುದ್ದದ ನಂತರ, ಹಳೇ ಒಡಂಬಡಿಕೆ ನಾಟಕೀಯುವಾಗಿ ಖಚಿತಗೊಂಡಿತು. ಕಳೆದ ಶತಮಾನದ ವಸ್ತುಶಾಸ್ತ್ರದ ಮಹಾ ಸಂಶೋಧನೆಯ ಹೆಸರು ದಿ ಡೆಡ್ ಸೀ ಸ್ಕ್ರೋಲ್ಸ್

# ಶತಮಾನದ ಶೋಧನೆ

1947ರಲ್ಲಿ ಇಸ್ರೇಲ್ ಮತ್ತು ಯೊರದಾನ್ ಗಡಿಯಲ್ಲಿನ, ಕೆಳಗಿನ ದಡೆಯಲ್ಲಿ ಬೆಡೆಯೆನ್ ಕುರುಬನು ತನ್ನ ಪ್ರಾಣಿಗಳನ್ನು ಮೇಯಿಸುತ್ತಿದ್ದನು. ಅಲ್ಲಿ ಕೆಲವು ಗುಹೆಗಳಿದ್ದವು, ಒಂದು ಕಲ್ಲನ್ನು ತೆಗೆದು ಅದರಲ್ಲಿ ಎಸೆದನು ಅಲ್ಲಿರುವ ಬಂಡೆಗಳಿಗೆ ಬಡದ ಶಬ್ದ ಕೇಳಿಸುವುದೆಂದು ವೀಕ್ಷಿಸಿದ, ಆದರೆ ಒಂದು ಮಡಿಕೆ ಒಡೆದ ಶಬ್ದ ಕೇಳಿಸಿತು. ವಸ್ತುಶಾಸ್ತ್ರ ಮತ್ತು ಮಡಿಕೆಗಳಲ್ಲಿ ಆಸಕ್ತಿಯಿರುವುದರಿಂದ ಆತನು ಮತ್ತು ಅವನ ಸ್ನೇಹಿತರು ಮೇಲೆ ಹತ್ತಿ ನೋಡಿದರು. ಅಲ್ಲಿ ಅವರು ಕಂಡದ್ದು ಹಳೆ ಮಡಿಕೆಗಳು ಅದರಲ್ಲಿ ಹಳೆ ಕಾಗದದ ಸುರುಳಿಗಳು. ಅವರು ಅದನ್ನು ಯೆರುಸಲೇಮಿನಲ್ಲಿರುವ ಹಳೆ ವಸ್ತು ಸಂಗ್ರಹಕರಿಗೆ ಮತ್ತು ವಸ್ತುಶಾಸ್ತ್ರ ಪಂಡಿತರಿಗೂ ತೋರಿಸಿದರು. ಆದರಿಂದ ಅವರು ಅಲ್ಲಿರುವ ಅಕ್ಕಪಕ್ಕ ಸ್ಥಳದಲ್ಲೆಲ್ಲ ಸಂಶೋಧಿಸಿದರು.

ಮುಂಬರುವ ಕೆಲವು ವಾರಗಳಲ್ಲಿ, 200 ಸುರುಳಿಗಳು, 40,000 ಕೆತ್ತಿರುವ ತುಂಡುಗಳು 11 ಗುಹೆಗಳಲ್ಲಿ ಸಿಕ್ಕಿತು, ಅದರಲ್ಲಿ ಅನೇಕ ಸುರುಳಿಗಳಲ್ಲಿ ಸತ್ಯವೇದದ ವಾಕ್ಯಗಳಿದ್ದವು. ಹಳೆ ಒಡಂಬಡಿಕೆಯ ಎಲ್ಲಾ ಪುಸ್ತಕಗಳು ಅದರಲ್ಲಿದ್ದವು, ಎಸ್ತರಳು ಒಂದನ್ನು ಬಿಟ್ಟು. ಮಿಕ್ಕ ಸುರುಳಿಗಳು ಬೇರೆ ವಿಷಯಗಳ ಧಾರ್ಮಿಕ ಸುರುಳಿಗಳು. ಗೊತ್ತಿಲ್ಲದೆಯೆ ಆ ಯವ್ವನಸ್ತ ಕುಪ್ಪನು ಸಂಘದ ಯೆರುಸಲೇಮನ ಹೊರಗಡೆ ಇರುವ ಗ್ರಂಥಾಲಯವನ್ನು ಕಂಡು ಹಿಡಿದಿದ್ದ. ಆ ದಿನಗಳ ಧಾರ್ಮಿಕ ಆವಾರಗಳು ಇಷ್ಟವಾಗದೆ, ಮರುಭೂಮಿಗೆ ಹೋಗಿ ಅಲ್ಲಿ ನೆಲೆಸಿದ್ದು ಅಲ್ಲಿ ಗ್ರಂಥಾಲಯವನ್ನು ಸ್ಥಾಪಿಸಿದರು. ಆ ಗ್ರಂಥಾಲಯವನ್ನೇ ವಸ್ತುಶಾಸ್ತ್ರ ಪಂಡಿತ ಕಂಡು ಹಿಡಿದು ಸಂತಸಪಟ್ಟರು.

ಆಗ ಸಿಕ್ಕ ಸುರುಳಿಗಳೆ ಬಹಳ ಹಳೆ ಸುರುಳಿಗಳಾಗಿದ್ದವು. ಯೂರೋಪ ಮತ್ತು ಯೆರುಸಲೇಮಿನಲ್ಲಿರುವ ಎಲ್ಲಾ ಗ್ರಂಥಾಲಯಗಳಲ್ಲಿ ಮತ್ತು ಸಂಗ್ರಹಾಲಯಗಳಲ್ಲಿರುವ ಎಲ್ಲಾ ಹಳೆ ಒಡಂಬಡಿಕೆಯ ಹಸ್ತಪ್ರತಿಗಿಂತಲೂ ಈಗ ಸಿಕ್ಕಿದ ಸುರುಳಿಗಳೆ ಹಳೆಯದಾಗಿದ್ದವು. ಇವು ಕ್ರಿಸ್ತ ಪೂರ್ವ 200ಕ್ಕೆ ಸೇರಿದವುಗಳಾಗಿದ್ದವು. ಇದು ಬಹಳ ಹಿಂದಿನ ಕಾಲದವುಗಳಾಗಿದ್ದವು.

ಈಗ ಹಳೆ ಪ್ರತಿ ಮಾಡುವವರನ್ನು ಪರೀಕ್ಷಿಸಿದರು. ಅವರು ಎಷ್ಟು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದಿದ್ದಾರೆ? ಎಷ್ಟು ಸರಿಯಾಗಿ ಅವರು ಅದನ್ನು ಅನುಕರಿಸಿದ್ದಾರೆ? ಅದರ ಪ್ರತಿಫಲ. ಯೂದರ ಪಂಡಿತರು ಹಳೆ ಒಡಂಬಡಿಕೆಯ ಗ್ರಂಥಗಳನ್ನು ಗಂಭೀರವಾಗಿ ಪರಿಶೋಧಿಸಿದರು. ಸಿಕ್ಕಿದ ಸುರುಳಿಗಳು ಇದ್ದ ಸುರುಳಿಗೆ ಸರಿಯಾಗೆ ಇದ್ದವು. ಆಗ ಹಳೆ ಒಡಂಬಡಿಕೆಯನ್ನು ಮತ್ತೆ ಬರೆಯಬೇಕೆಂದು ಸುದ್ದಿ ಹಬ್ಬಿತ್ತು. ಆದರೆ ಪರಿಶೋಧಿಸಿ ನೋಡಿದ ಮೇಲೆ ತಿಳಿಯಿತು ಅದು ಸರಿಯಾಗದೆ ಇದೆ ಎಂದು ತಲತಲಾಂತರಗಳಿಂದ ಪ್ರತಿಯನ್ನು ಅನುಕರಿಸಿಕೊಂಡು ಬಂದರು ಇಷ್ಟು ಖಚಿತವಾಗಿ ಹೇಗೆ ಅನುಕರಿಸಿದರು? ಅದರ ಉತ್ತರ ಆಗಿನ ಕಾಲದ ಯೂದರ ಪಂಡಿತರ ಶಿಸ್ತಿನ ಸಂಪ್ರದಾಯ. ಯಾವಾಗಲಾದರೂ ಪ್ರತಿಯನ್ನು

ಅನುಕರಿಸುತ್ತಿರುವಾಗ ಒಂದು ತಪ್ಪು ನಡೆದರು ಅಥವಾ ಒಂದು ಅಕ್ಷರ ಸೇರಿಸಿದರು, ಕಳೆದರೂ ಆ ಇಡೀ ಪ್ರತಿಯನ್ನು ನಾಶ ಮಾಡಿಬಿಡುತ್ತಿದ್ದರು. ಅವರು ಖಚಿತವಾಗಿರಬೇಕೆಂದು ಧರ್ಮಾಂಧತೆಯಿಂದಿದ್ದರು. ಯೂದರು ಬೇರೆ ಯಾವ ಗ್ರಂಥಗಳಿಂದಲೂ ಹಳೆ ಒಡಂಬಡಿಕೆಯನ್ನು ಸುರಕ್ಷತೆಯಿಂದ ಕಾಪಾಡಿಕೊಂಡು ಬಂದರು. ಪ್ರತಿಯೊಂದು ಪ್ರತಿಯಲ್ಲಿಯೂ ಎಷ್ಟು ಅಕ್ಷರಗಳು, ಪದಗಳು, ವಾಕ್ಯಗಳಿದ್ದವೆಂದು ಎಣಿಸಿಕೊಂಡಿದ್ದರು. ಯಾವಾಗಲಾದರು ಈ ಪ್ರತಿಗಳನ್ನು ಅಂಗೀಕಾರ ಮಾಡಿಕೊಳ್ಳಬೇಕಾದರೆ ಇದನ್ನೆಲ್ಲ ಎಣಿಸಿಕೊಂಡೆ ತೆಗೆದುಕೊಳ್ಳುತ್ತಿದ್ದರು. ಪಂಡಿತರು, ವಕೀಲರು ಈ ಗ್ರಂಥಗಳು ಖಚಿತವಾಗಿರಬೇಕೆಂದು ಸಂಪೂರ್ಣ ಸಮಯ ಕೆಲಸ ಮಾಡುತ್ತಿದ್ದರು. ಆ ಕೆಲಸದಲ್ಲಿ ಅವರು ಸಫಲರಾದರು.

ಕುಮ್ರಾನ್‌ನಲ್ಲಿ ಒಂದು ಸ್ಕ್ರಿಪ್ಟೋರಿಯಮ್‌ನ್ನು ಪರಿಶೋಧಿಸಿದರು. ಸ್ಕ್ರಿಪ್ಟೋರಿಯಮ್ ಕೈ ಪ್ರತಿಗಳನ್ನು ಅನುಕರಿಸುವುದಕ್ಕಾಗಿ ಉಪಯೊಗಿಸುವಂತ ಒಂದು ಕೊಠಡಿ, ಮಡಿಕೆಗಳ ಚೂರುಗಳು ಅಲ್ಲಿ ಸಿಕ್ಕಿದ್ದವು, ಈ ಚೂರುಗಳ ಮೇಲೆಯೆ ಪಂಡಿತರು ತಮ್ಮ ಕೈ ಲಿಪಿಯನ್ನು ಸುಂದರವಾಗಿರಬೇಕೆಂದು ಅಭ್ಯಾಸಿಸುತ್ತಿದ್ದರು. ಈ ಮಡಿಕೆಯ ಚೂರುಗಳ ಮೇಲೆ ಅಭ್ಯಾಸ ಮಾಡಿದ ನಂತರವೆ ಗ್ರಂಥಾಲಯಗಳಿಗೆ ಬರೆಯುವುದಕ್ಕೆ ಪ್ರಾರಂಭಿಸುತ್ತಿದ್ದರು. ಖಚಿತವಾಗಿರುವುದು ಅವರ ಭ್ರಾಂತಿಯಾಗಿತ್ತು. ಈ ಖಚಿತವಾಗಿಡಬೇಕೆಂಬ ಭ್ರಾಂತಿಯು ಹಳೆಯ ಸಂಪ್ರದಾಯದ ಒಂದು ಭಾಗವು.

ಉದಾಹರಣೆಗೆ, ಹಳೆ ಒಡಂಬಡಿಕೆ ಮೊದಲ ಐದು ಪುಸ್ತಕಗಳಲ್ಲಿ (ತೊರ) ಅರ್ಧ ದಶಲಕ್ಷ ಅಕ್ಷರಗಳಿವೆ. ಈ ಸಿಕ್ಕಿರುವ ಡೆಡ್ ಸೀಸ್ಕ್ರಾಲ್ಸ್ ಅನ್ನು ಪರೀಕ್ಷಿಸಿ ನೋಡಿದಾಗ, 5,00,000 ಅಕ್ಷರಗಳಲ್ಲಿ ಬರೀ 169ರ ಬಗ್ಗೆ ಮಾತ್ರ ಪ್ರಶ್ನಿಸಿದರು. ಅದರಲ್ಲಿ ಬಹಳಷ್ಟು ಸ್ವರವ್ಯಂಜನ ಅಥವ ಪದಗಳು ಎರಡು ಸಾರಿ ಉಪಯೋಗಿಸಿರುವುದೆ. ಆದರೆ ಯಾವುದೇ ಘಟನೆ, ಆಚಾರ ಭೋಧನೆಗೆ ಪರಿಣಾಮ ಬೀರಿಲ್ಲ.

ಮೊಶಾಯ ಗ್ರಂಥವು ಇದೆ ಪರಿಸ್ಥಿತಿಗೆ ಒಳಗಾಯಿತು. 1952ರ ರಿವೈಸ್ಡ್ ಸ್ಟ್ಯಾಂಡರ್ಡ್ ವರ್ಶನ್ ನ ಸತ್ಯವೇದದ ಅನುವಾಂತರದಲ್ಲಿ ಯೆಶಾಯ ಗ್ರಂಥದಲ್ಲಿ ಬರೀ 13 ಸಣ್ಣ ಬದಲಾವಣೆಗಳಿತ್ತು. ಜಾನ್ ಓಕ್ಸ್ ಹೇಳಿದಂತೆ ಹಳೆ ಒಡಂಬಡಿಕೆಯ ಎರಡನೆ ದೊಡ್ಡ ಗ್ರಂಥದಲ್ಲಿ 1000 ವರ್ಷಗಳಲ್ಲಿ ಬರೀ 13 ಬದಲಾವಣೆಗಳು ಮಾತ್ರವೇ. ಸಿಕ್ಕಿರುವ ಸುರುಳಿಗಳು ಹಳೆ ಒಡಂಬಡಿಕೆ ಗ್ರಂಥಗಳು 1000 ವರ್ಷಗಳ ನಂತರವು ಸಮಾನವಾಗಿಯೆ ಇದ್ದವು. ಹಳೆ ಒಡಂಬಡಿಕೆಯು ಎಷ್ಟು ಸುರಕ್ಷತೆಯಿಂದ ಕಾಪಾಡಿಕೊಂಡು ಬಂದಿದ್ದಾರೆ ಎಂಬುವುದಕ್ಕೆ ಸಾಕ್ಷಿ. ಆಗ ಸತ್ಯವೇದಕ್ಕೆ ತೋರಿಸುತ್ತಿದ್ದ ಶ್ರದ್ಧೆಗೆ ಇದು ಉದಾಹರಣೆ.

ಎಫ್. ಎಫ್. ಬ್ರುಸ್ ಹೇಳಿದಂತೆ ಈಗ ಸಿಕ್ಕ ಸಾಕ್ಷಿ ಆಗಿನ ಕಾಲದ ಯೋಶದ

ಪಂಡಿತರು ಇಬ್ರಿಯ ಸತ್ಯವೇದವನ್ನು ಅನುಕರಿಸಿದಾಗ ಖಚಿತವಾಗಿಯೇ ಅನುಕರಿಸಿದರೆಂದು ನಂಬಬಹುದು.

ಬಹಳ ಸಂಶಯಪಡುತ್ತಿದ್ದ ಪಂಡಿತರು ಕೂಡ ಇದನ್ನು ನೋಡಿ ಸತ್ಯವೇದವನ್ನು ನಂಬಿದರು. ಈ ದಿನ ನಾವು ಓದುವ ಗ್ರಂಥ ಮೂಲಭೂತ ಪ್ರತಿಗಳಿಂದ ಖಚಿತವಾಗಿ ಅನುಕರಿಸಿರುವುದೆ (ಹಳೆ ಒಡಂಬಡಿಕೆಯ ಪ್ರವಾದನೆಗಳಿಗೆ ಇದು ಬಹಳ ದೃಢಪಡಿಸುತ್ತದೆ. ಈಗ ಸಾಕ್ಷಿ ಸಿಕ್ಕಿದ್ದು ಸ್ಪಷ್ಟಪಡಿಸುತ್ತದೆ, ಇದು ಕ್ರಿಸ್ತ ಬರುವುದಕ್ಕಿಂತ ಬಹಳ ಕಾಲದ ಹಿಂದೆ ಬರೆದದ್ದು.

ಸೆಫ್ಟುಯಜೆಂಟ್ (LXX) ಒಬ್ಬ ಇಬ್ರಿಯ ಭಾಷೆಯಿಂದ ಗ್ರೀಕ್ ಭಾಷೆಗೆ ಅನುವಾದಿಸುವವನು. ಕ್ರಿಸ್ತ ಪೂರ್ವ 250ರಲ್ಲಿ ಪೂರ್ಣಗೊಂಡ ಅನುವಾದ, ಇಬ್ರಿಯ ಗ್ರಂಥ ನಂಬಬಹುದಾದದೆಂದು ಖಚಿತಪಡಿಸುತ್ತದೆ. ಇತಿಹಾಸ ಹೇಳುತ್ತದೆ, 72 ಹಿರಿಯರನ್ನು ಯೆರುಸೆಲೇಮಿನಿಂದ ಅಲೆಗ್ಸಾಂಡ್ರಿಯ, ಐಗುಪ್ತಕ್ಕೆ ಅನುವಾದ ಮಾಡುವುದಕ್ಕಾಗಿಯೇ ಕಳುಹಿಸಿದರು. ಯೂದ ಸಮುದಾಯವು ಇಬ್ರಿಯ ಭಾಷೆಯಿಂದ ಬೇಸತ್ತು ಗ್ರೀಕ್ ಭಾಷೆಗೆ ಅನುವಾದ ಮಾಡಬೇಕೆಂದು ಕೇಳಿದರು. ಹಿರಿಯರು ಆ ಕೆಲಸವನ್ನು 72 ದಿನಗಳಲ್ಲಿ ಮಾಡಿ ಮುಗಿಸಿದರು. ಬಹಳವಾಗಿ ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಿರುವುದು ಇಬ್ರಿಯ ಗ್ರಂಥವನ್ನು ಸ್ಪಷ್ಟಪಡಿಸುತ್ತದೆ.

ಮೊದಲನೆ ಮತ್ತು ಎರಡನೆ ಶತಮಾನದ ಬರಹಗಾರರು ಹಳೆ ಒಡಂಬಡಿಕೆಯನ್ನು ಬಹಳವಾಗಿ ಉಪಯೋಗಿಸಿದ್ದಾರೆ. ಓರಿಜನ್ ಅದನ್ನು ಮತ್ತೆ ಸಂಪೂರ್ಣವಾಗಿ ಅನುವಾದಿಸಿದರು. ಜೆಸೆಫಸ್, ಫಿಲೋ ಮತ್ತು ಅನೇಕರು ಹಳೆ ಒಡಂಬಡಿಕೆಯನ್ನು ಉಪಯೋಗಿಸಿದ್ದಾರೆ. ಇದೆಲ್ಲ ಹಳೆ ಒಡಂಬಡಿಕೆಯನ್ನು ಖಚಿತಪಡಿಸುತ್ತದೆ.

ಸಮಾರಿಯ ಪೆಂಟಟೆಚ್ ಕ್ರಿಸ್ತಪೂರ್ವ 400ರದ್ದು. ಇದರಲ್ಲಿ ಸುರಕ್ಷತೆಯಿಂದ ಕಾಪಾಡಿಕೊಂಡು ಬಂದ ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳಿವೆ. ಇದು ಇಬ್ರಿಯಯಿಂದ ಅರಾಮಿಕ್ ಭಾಷೆಗೆ ಅನುವಾದಿಸಿರುವುದು, ಅದರಲ್ಲಿ ಸಣ್ಣ ವ್ಯಾಕಾರಣ ವ್ಯತ್ಯಾಸಗಳಿದ್ದವು. ಅದು ಹಳೆ ಒಡಂಬಡಿಕೆ ಖಚಿತವಾದದೆಂದು ತೋರಿಸುತ್ತದೆ.

-ಅರಾಮಿಕ್ ಟಾರ್ಗಮ್- 150 ಕ್ರಿಸ್ತ ಸಕದಿಂದ ಹಳೆ ಒಡಂಬಡಿಕೆಯನ್ನು ಉಪಯೋಗಿಸುತ್ತದೆ. -ಸಣ್ಣ ಜೋಡಿ ಬೆಳ್ಳಿ ಸುರಳಿಗಳು (ಕ್ರಿಸ್ತ ಪೂರ್ವ 750) ಯೆರುಸಲೇಮಿನಲ್ಲಿರುವ ಕಂಬಗಳಲ್ಲಿ ವಸ್ತುಶಾಸ್ತ್ರ ಪಂಡಿತರಿಗೆ 1979 ರಲ್ಲಿ ಸಿಕ್ಕಿತು. ಇದರಲ್ಲಿ ಸಂಖ್ಯಾಖಾಂಡ 6:24-26 ಇತ್ತು. ಅದನ್ನು ನಾಶ ಮಾಡದೆ ತೆಗೆಯುವುದಕ್ಕೆ ಮೂರು ವರ್ಷ ತೆಗೆದುಕೊಂಡಿತು. ಅದರಲ್ಲಿ ಅವರಿಗೆ ಸಿಕ್ಕಿದ್ದು ಬಹಳ ಪ್ರಾಚೀನವಾದಂತ ಸತ್ಯವೇದದ ಸುರುಳಿ

ತುಂಡುಗಳು. 8ನೇ ಶತಮಾನಕ್ಕೆ ಸೇರಿದ್ದು. ಈಗಿನ ಸತ್ಯವೇದದ ವಚನಗಳಿಗೆ ಸರಿಯಾಗಿಯೇ ಇದ್ದವು. ಇದು ಬಹಳ ಸಂಶಯಪಡುವ ತಾಮಸರಿಗೆ ಸರಿಯಾದ ಉತ್ತರವಾಗಿತ್ತು - ಯಾವಾಗ ಘಟನೆಗಳು ನಡೆಯಿತು ಆವಾಗಲೇ ಅದರ ಬಗ್ಗೆ ಬರೆಯುತ್ತಿದ್ದರೆಂದು.

ನಾವು ಹೀಗೆಯೇ ಮುಂದುವರೆಯುತ್ತಲೆ ಇರಬಹುದು. ಬಹಳ ಪುಸ್ತಕಗಳು ಬರೆದಿದ್ದಾರೆ ಸತ್ಯವೇದದ ಸ್ಪಷ್ಟತೆ ಮತ್ತು ನಂಬಲು ಸಾಧ್ಯವೆ ಅನ್ನುವ ಬಗ್ಗೆ ಕೆಳಗೆ ನಾನು ಪುಸ್ತಕಗಳ ಪಟ್ಟಿ ಕೊಡುತ್ತೇನೆ. ನೀವು ಇನ್ನು ಹೆಚ್ಚು ತಿಳಿದುಕೊಳ್ಳುವುದಕ್ಕೆ.

ಇದರಲ್ಲಿ ಮುಖ್ಯವಾದ ಅಂಶವೇನೆಂದರೆ - ನಾವು ಸತ್ಯವೇದ ತೆಗೆದು ಓದಿದಾಗ, ಅದು ಹೇಗೆ ಬರೆದತ್ತು ಹಾಗೆ ಓದುತ್ತಿದ್ದೇವೆ. ತಲಾತಲಾಂತದಿಂದಲೂ ವಚನಗಳು ಖಚಿತವಾಗಿರಬೇಕೆಂದು ದೇವರು ಕಾಪಾಡಿಕೊಂಡಿದ್ದಾರೆ. ನಾವು ಸತ್ಯವೇದ ಓದುವಾಗ, ಬರೆದವರು ಹೇಗೆ ಬರೆದಿದ್ದರೊ ಹಾಗೆ ಓದುತ್ತಿದ್ದೇವೆಂದು ನಂಬಬಹುದು.

ಆಂಗ್ಲ ಸಂಗ್ರಹಾಲಯದ ಗ್ರಂಥಾಲಯದ ಅಧ್ಯಾಪಕರಾದ ಸರ್ ಫ್ರೆಡರಿಕ್ ಕೆನ್ಯೆನ್ ಎಂಬುವರು ಹೇಳಿದರು ಒಬ್ಬ ಕ್ರೈಸ್ತ ಸಂಪೂರ್ಣ ಸತ್ಯವೇದವನ್ನು ಕೈಯಲ್ಲಿ ಹಿಡಿದು, ಇದು ನಿಜವಾಗಿಯೂ ದೇವರ ವಾಕ್ಯವೇ, ತಲತಲಾಂತರಗಳಿಂದ ಯಾವುದೇ ವ್ಯತ್ಯಾಸವಿಲ್ಲದೆ ನಮ್ಮ ಕೈ ಸೇರಿದೆ ಎಂದು ಸ್ವೀಕರಿಸಬಹುದು.